

# ಸಿಹಿ ಕಹಿ

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 117 Friday 10-01-2025 E-mail : maruti.b.hosamani76@gmail.com Page: 4 Price : Rs. 1/-

## ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಕೆಂಗಾರ ವಿರುದ್ಧ ಗೋವಿಂದಗೌಡ್ರ ಗೆಲುವು

**ರೋಣ :** ನಗರದಲ್ಲಿ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ರೋಣ ಇದರ ಹೊಳೆ ಆಲೂರ ಸಾಲಗಾರ ಮತ ಕ್ಷೇತ್ರಕ್ಕೆ ಇದೇ ಜನವರಿ 5 ರಂದು ನಡೆದ ಚುನಾವಣೆಯಲ್ಲಿ ಬಜೆಪಿ ಬೆಂಬಲಿತ ಅಭ್ಯಾರ್ಥಿ ಹುಲ್ಲಪ್ಪ ಬಸವರಾಜ ಕೆಂಗಾರ ಅವರ ವಿರುದ್ಧ ಕಾಂಗ್ರೇಸ್ ಬೆಂಬಲಿತ ಅಭ್ಯರ್ಥಿ ಯಚ್ಚರಗೌಡ ವೆಂಕನಗೌಡ ಗೋವಿಂದಗೌಡ್ರ ಗೆಲುವು ಸಾಧಿಸಿದರು.

ಒಟ್ಟು 169 ಮತಗಳ ಇದ್ದು ಇದರ ಪೈಕಿ 82 ಮತಗಳನ್ನು ಹುಲ್ಲಪ್ಪ ಕೆಂಗಾರ ಪಡೆದಿದ್ದು, ಯಚ್ಚರಗೌಡ ಗೋವಿಂದಗೌಡ್ರ 87 ಮತಗಳನ್ನು ಪಡೆದು 5 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಇದೆ ಸಂದರ್ಭದಲ್ಲಿ ಶಾಸಕ ಜಿ.ಎಸ್ ಪಾಟೀಲ ವ್ಯಕ್ತಿಯಲ್ಲ ಬದಲಾಗಿ ಅವರೊಂದು






ಶಕ್ತಿ ಎಂದು ಪಿ.ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಂಗಪ್ಪ ಮೆಣಸಿನಕಾಯಿ ಹೇಳಿದರು. ಬುಧವಾರ ಪಿ.ಎಲ್.ಡಿ ಬ್ಯಾಂಕ್ ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುವ ಸಭೆಯಲ್ಲಿ ಭಾಗಿಯಾಗಿ ಮಾತನಾಡಿದರು. ರೋಣ ಪಿ.ಎಲ್.ಡಿ ಬ್ಯಾಂಕ್ ರೈತರ ಪ್ರತಿಷ್ಠಿತ ಬ್ಯಾಂಕ್ ಎನ್ನುವುದರಲ್ಲಿ ಸಂದೇಹಲ್ಲ. ಅಲ್ಲದೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ ಜನ್ಮ ತಾಳಿದ ದಿನದಿಂದ ಮತದಾರರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಹೆಚ್ಚಿನ ಒಲುವು ತೋರುವ ಮೂಲಕ ಆಡಳಿತದ ಚುಕ್ಕಾಣಿ ನೀಡಿದ್ದಾರೆ. ಶಾಸಕ ಜಿ.ಎಸ್ ಪಾಟೀಲ ಅನೇಕ ಯೋಜನೆ ತರುವ ಮೂಲಕ ಅವುಗಳನ್ನು ರೈತರಿಗೆ ತಲುಪಿಸುವಲ್ಲಿ ಪ್ರಾಮಾಣಿಕತೆ ತೋರಿದ್ದರ ಫಲವಾಗಿ ಇಂದು ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ ಎಂದರು.14 ಸ್ಥಾನಗಳನ್ನು ಹೊಂದಿರುವ ಪಿ.ಎಲ್.ಡಿ ಬ್ಯಾಂಕ್ಗೆ ಕಾಂಗ್ರೆಸ್ ಬೆಂಬಲಿತ 7 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆ ಗೊಂಡಿ–ದ್ದರು. ಇನ್ನು 7 ಕ್ಷೇತ್ರಗಳಿಗೆ ಜ.5 ರಂದು ಚುನಾವಣೆಗೆ ದಿನಾಂಕ ನಿಗದಿಯಾಗಿತ್ತು. ಅಲ್ಲದೆ ಚುನಾವಣೆ ನಂತರ ಮತಗಳ ಎಣಿಕೆ ಕಾರ್ಯ ನಡೆದಿತ್ತು. ಆದರೆ ನ್ಯಾಯಲಯದಲ್ಲಿ ಪ್ರಕರಣವಿದ್ದ ಕಾರಣ ವಿಜೇತ ಅಭ್ಯರ್ಥಿಗಳ ಘೋಷಣೆ ಮಾಡಿರಲಿಲ್ಲ. ಹೀಗಾಗಿ ಎಣಿಕೆಯಲ್ಲಿ ಮುಂದಿದ್ದ ಅಭ್ಯರ್ಥಿಗಳು ವಿಜಯೋತ್ಸವ ಆಚರಿಸಿದ್ದರು. ಆದರೆ 7 ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗಿದ್ದು, ಸವಡಿ ಕ್ಷೇತ್ರದ ಪ್ರಕರಣ ಮಾತ್ರ ನ್ಯಾಯಲಯದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಸನಗೌಡ ಪೋಲಿಸ್ ಪಾಟೀಲ್, ನಿಂಗಪ್ಪ ಬದಾಮಿ, ಬಾಳಪ್ಪ ಖ್ಯಾಡ, ರಂಗನಗೌಡ ಪಾಟೀಲ, ಹೆಂಮತಗೌಡ ಬಾಲನಗೌಡ್ರ, ಮಾದೇನಗೌಡ ಭೀಮನಗೌಡ್ರ, ಮಹಾಗುಂಡಪ್ಪ ಭಾವಿ. ವೀರನಗೌಡ ಭೀಮನಗೌಡ್ರ, ವೆಂಕನಗೌಡ ಗೋವಿಂದಗೌಡ್ರ, ವೀರನಗೌಡ ಗಿಡ್ಡಮಣ್ಣವರ, ಶೇಖರಗೌಡ ಬಾಳನಗೌಡ್ರ, ಕುಬೇರಗೌಡ ಭೀಮನಗೌಡ್ರ, ಶಿವುಕುಮಾರ ಭಾವಿ, ರವಿ ವಡ್ಡರ ಸೇರಿದಂತೆ ಅನೇಕ ಇದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ. ರೋಣ.**

# ಜನವರಿ 31 ಕ್ಕೆ ರಾವುತ ಬಿಡುಗಡೆ

**ಬೆಂಗಳೂರ :** ವಿಶ್ವಕರ್ಮ ಸಿನಿಮಾಸ್ ನಿರ್ಮಾಣದ 'ರಾವುತ' ಕನ್ನಡ ಚಲನ ಚಿತ್ರವು ಒಂದು ವಿಭಿನ್ನ ಪ್ರಯತ್ನದ ಸಿನಿಮಾ. ಗಂಡುಗಲಿ ಕುಮಾರರಾಮ ಕಾಲದ ಸಾಮಾನ್ಯ ಜನರ ಮತ್ತು ಸಾಧಕರ ಕಥೆ. ಆದರೆ ಸಿನಿಮಾ ಎಂದರೆ ಸಾಹಸ, ಪ್ರೀತಿ, ದ್ವೇಷ, ಅಂಥ ಹಲವು ಮಜಲು ಇಟ್ಟುಕೊಂಡು ಬರುತ್ತವೆ. ರಾವುತ ಸಿನಿಮಾ ಹಾಗಿಲ್ಲ, ಅದರ ಎಳೆಯೇ ಕುತೂಹಲ ಭರಿತವಾಗಿದೆ, ಅದೇನೆಂದರೆ ಸಾವಿನ ನಂತರ ಏನಾಗುತ್ತೆ ಅನ್ನೋದನ್ನ ಕಥೆ–ಯ ಸಾರವಾಗಿಸಿದ್ದಾರೆ ಕಥೆಗಾರ ಸಿದ್ದುವಜ್ರಪ್ಪ. ಇದರ ವಿಭಿನ್ನ ಕ್ಲೈಮ್ಯಾಕ್ಸ್ ಅರ್ಥವೇ ಸಿನಿಮಾದ ಸಾವಿನ ನಂತರದ ಪಯಣ ತಿಳಿಸುತ್ತದೆ ಎಂದು ಹೇಳಿದ್ದಾರೆ ನಿರ್ಮಾಪಕರು. ಈ ಸಿನಿಮಾವು ಕನ್ನಡದ ಇನ್ನೊಂದು ನಾಗಮಂಡಲ ಆಗುವ ಲಕ್ಷಣವಿದೆ. ಅದಕ್ಕೆ ಕಾರಣ ಸಂಪೂರ್ಣ ಉತ್ತರ ಕರ್ನಾಟಕ ಶೈಲಿಯ ಸಂಸ್ಕೃತಿಯ ದೃಶ್ಯ ಚಿತ್ರಣವಿರುವುದೇ ಇದಕ್ಕೆ ಕಾರಣ ಎಂದು ಇತ್ತೀಚಿಗೆ ನಡೆದ ಪ್ರೀಮಿಯರ್ ಶೋ ನೋಡಿದ ಗಣ್ಯರು ಮಿತ್ರರು ತಿಳಿಸಿದ್ದಾರೆ. ಜನವರಿ 31 ಕ್ಕೆ ಜನ ಮನ್ನಣೆ ಪಡೆಯಲು ರಾಜ್ಯಾದ್ಯಂತ ಚಿತ್ರ ಮಂದಿರಕ್ಕೆ ಬರಲಿದೆ 'ರಾವುತ' ಏನೇ ಆಗಲಿ ಕನ್ನಡಕ್ಕೆ ಸೈದ್ಧಾಂತಿಕ ಪ್ರಯತ್ನ ನಡೆಯುವುದು ವಿರಳ. ಈ ಪ್ರಯತ್ನಕ್ಕೆ ಜ 31 ಕ್ಕೆ ಹೆಸರಾಂತ ನಿರ್ಮಾಪಕ ಜಾಕ್ ಮಂಜು ಅವರ ಶಾಲಿನಿ ಆರ್ಟ್ಸ್ ಸಂಸ್ಥೆಯ ಮುಖಾಂತರ ರಾಜ್ಯಾದ್ಯಂತ ಬಿಡುಗಡೆ ಗೊಂಡು ಕನ್ನಡ ಪ್ರೇಕ್ಷಕರ ಮುಂದೆ ಬರುತ್ತಿದೆ 'ರಾವುತ' ನಾಯಕನಾಗಿ ರಾಜ್



ಪ್ರವೀಣ್, ನಾಯಕಿಯಾಗಿ ಭವಾನಿ ಪುರೋಹಿತ್, ಹಾಗೂ ಇನ್ನುಳಿದ ಕಲಾವಿದರೂ ಅವರ ಪಾತ್ರಕ್ಕೆ ಜೀವ ತುಂಬಿದ್ದಾರೆ. ನಿರ್ಮಾಪಕ ಈರಣ್ಣ ಶುಭಾಷ್ ಬಡಿಗೇರ್, ನಿರ್ದೇಶಕ ಸಿದ್ದುವಜ್ರಪ್ಪ ಮೊದಲ ಚಿತ್ರ ಪ್ರದರ್ಶನದ ತಯಾರಿಯ ಉತ್ಸಾಹದಲ್ಲಿ ಇದ್ದಾರೆ. ಜ. 31 ಕ್ಕೆ ಬಿಡುಗಡೆ ಇರುವ ಕಾರಣ ಸದ್ಯದಲ್ಲೇ ಟ್ರೈಲರ್, ಟಿಸರ್ ಬಿಡುಗಡೆ ಆಗಲಿವೆ. ಚಿತ್ರಕ್ಕೆ ಸಂಪರ್ಕ ಸುಧೀಂದ್ರ ವೆಂಕಟೇಶ, ಡಾ. ಪ್ರಭು ಗಂಜಿಹಾಳ,ಡಾ. ವೀರೇಶ ಹಂಡಿಗಿ ಯವರದಿದೆ.


**–ಡಾ.ಪ್ರಭು ಗಂಜಿಹಾಳ**
**ಮೊ:9448775346**

## ಸೈಬರ್ ವಂಚನೆಯಿಂದ ಕಳೆದುಕೊಂಡ ಹಣ ಮರಳಿ ಪಡೆದ ಸಿಬ್ಬಂದಿ

**ರಬಕವಿ–ಬನಹಟ್ಟಿ:**ಸೈಬರ್‌ಕ್ರೈಂಬ್ರಾ್ಯಂಚಿನ ಸಹಕಾರದಿಂದ ಸೈಬರ್ ವಂಚನೆಗೊಳಗಾಗಿ ಕಳೆದುಕೊಂಡಿದ್ದ 2.5 ಲಕ್ಷ ರೂ. ಹಣವನ್ನು ತಾಲೂಕು ಪಂಚಾಯತ್ ಸಿಬ್ಬಂದಿ ಮರಳಿ ಪಡೆದಿದ್ದಾರೆ. ಸೈಬರ್ ವಂಚನೆ ಜಾಲದಲ್ಲಿ 2.5 ಲಕ್ಷ ರೂ. ಕಳೆದುಕೊಂಡಿದ್ದರು. ಸೈಬರ್ ಕ್ರೈಂ ಪೋರ್ಟಲ್ನಿಂದ ಪ್ರಕರಣ ದಾಖಲಿಸಿದ್ದರ ಪರಿಣಾಮ ಸಮಯ ಪ್ರಜ್ಞೆಯಿಂದಪೂರ್ತಿಹಣಹಿಂಪಡೆದಿದ್ದಾರೆ. ಕಳೆದ ಡಿಸೆಂಬರ್ 26 ರಂದು 'ಎಸ್.ಬಿ.ಐ. ಲೋಗೋದ ಚಿಹ್ನೆಯೊಂದಿಗೆ ಹಿಂದಿ ಭಾಷೆಯಲ್ಲಿ ಆಗಂತುಕರು ಕರೆ ಮಾಡಿದ್ದಾರೆ. ನಿಮ್ಮ ಎಸ್.ಬಿ.ಐ. ನ ಡೆಬಿಟ್/ಕ್ರೆಡಿಟ್ ಕಾರ್ಡಿನ ಅವಧಿ ಇಂದು ಮುಕ್ತಾಯಗೊಳ್ಳಲಿದೆ. ಕಾರ್ಡ್ ನಂಬರ್ ದೃಢೀಕರಿಸಿಕೊಳ್ಳಲು ನಂಬರ್ ತಿಳಿಸಿ ಎಂದಿದ್ದಾರೆ. ಕರೆಯನ್ನು ನಿರ್ಲಕ್ಷ್ಯ ಮಾಡಿದ ನೌಕರನಿಗೆ ಮತ್ತೇ ಮರುದಿನ ಕರೆ ಮಾಡಿ ನಂಬರ್ ತಿಳಿಸುವಂತೆ ವಶೀಕರಣದ ಮಾತುಗಳನ್ನಾಡಿದ್ದಾರೆ.

ನಾನುಸ್ಥಳೀಯಶಾಖೆಗೆಭೇಟ್ಟಿಕೊಡುವುದಾಗಿ ತಿಳಿಸಿದ ನೌಕರನಿಗೆ ಬ್ಯಾಂಕ್ಗಳಿಗೆ ಎರಡು ದಿನ ರಜೆಇರುವಕಾರಣಇಲ್ಲಿಂದಲೇತಮ್ಮಕ್ರೆಡಿಟ್ ಕಾರ್ಡ್ ಐವತ್ತು ಸಾವಿರ ಬದಲಾಗಿ ಒಂದು ಲಕ್ಷ ರೂ.ಗಳವರೆಗೆ ಹೆಚ್ಚಿಸಲಾಗುವದೆಂದು ತಿಳಿಸಿದ್ದನ್ನು ನಂಬಿದ ನೌಕರ ಕಾರ್ಡ್ ಮೇಲಿನ ಸಂಖ್ಯೆಗಳನ್ನು ಹೇಳಿದ್ದಾರೆ.

ಆ ಕಡೆಯಿಂದ ತಮ್ಮ ನಂಬರ್ಗಳು



ಸರಿಯಾಗಿವೆಧನ್ಯವಾದವೆಂದುತಿಳಿಸಿದ್ದಾರೆ. ಅದರಂತೆ ಮತ್ತೊಮ್ಮೆ ಅವಧಿ ಮುಕ್ತಾಯದ ದಿನಾಂಕ ಸ್ಪಷ್ಟಪಡಿಸಿ ಎಂದಿದ್ದಾರೆ. ಮತ್ತೇ ವಿಶ್ವಾಸದ ಮಾತುಗಳು ಹಿಂದಿ ಭಾಷೆಯಲ್ಲಿಯೇ ಮುಂದುವರೆದು ಸಿವಿವಿ ನಂಬರ್ನ್ನು ಸ್ಪಷ್ಟಪಡಿಸಿ ಎಂದಿದ್ದಷ್ಟೇ ತಡ ಉತ್ತರಿಸಿದ ನಂತರ 19 ಸಾವಿರ ಚಿಲ್ಲರೆ ಹಣ ಬಟವಡೆಯಾಗುತ್ತಲೇ ಖಾತೆಯಲ್ಲಿರುವ ಎಲ್ಲ ಹಣ ಖಾಲಿ ಮಾಡಿದ್ದಾರೆ.

ಮೂರು ದಿನಗಳಿಂದ ಹಣ ಬಟವಡೆ: ಡಿಸೆಂಬರ್ 27 ರಿಂದ 30 ನೇ ತಾರೀಖಿನವರೆಗೂ 19 ಸಾವಿರಕ್ಕೂ ಹೆಚ್ಚು ಹಣವನ್ನು ಸುಮಾರು ಹನ್ನೆರಡು ಬಾರಿ ಬಟವಡೆ ಮಾಡಿಕೊಂಡಿದ್ದಾರೆ. ಈ ಕುರಿತು ಗ್ರಾಹಕನಿಗೆ ತಿಳಿಯಬಾರದೆಂಬ ಉದ್ದೇಶಕ್ಕೆ ಡಿ.ಎನ್.ಡಿ.(ಡುನಾಟ್ ಡಿಸ್ಟರ್ಬ್)ಅಂದರೆ ಮೊಬೈಲ್ಗಳಿಗೆಖಾತೆಯಮಾಹಿತಿಬಾರದಂತೆ ಪ್ಲಾನ್ ಹೂಡಿದ್ದಾರೆ. ಸಂಶಯಗೊಂಡ ಸಂತ್ರಸ್ತ ಇಂದು ಸೋಮವಾರ ಸ್ಥಳೀಯ ಎಸ್ಬಿಐನಲ್ಲಿ ತೆರಳಿ ಖಾತೆಯ ಲಿಖಿತ ಹೇಳಿಕೆ ಪಡೆದ ನಂತರ ಕಕ್ಕಾಬಿಕ್ಕಿಯಾಗಿದ್ದಾರೆ. ಇತ್ತ ಮೊಬೈಲ್ ಮೂಲಕ ಪಡೆದ ನಕಲಿ ಸಹಾಯವಾಣಿ ನಂಬರ್ಗೆ ಕರೆ ಮಾಡಿದಾಗ ಅದು ಸ್ವಿಚ್ ಆಫ್ ಆಗಿದೆ.

ತಕ್ಷಣಮೋಸಹೋಗಿರುವಬಗ್ಗೆಖಚಿತವಾಗಿ, ಸಿಸಿಪಿ (ಸೈಬರ್ ಕ್ರೈಂ ಪೋರ್ಟಲ್ ) ಆನ್ಲೈನ್ ಮೂಲಕ ದೂರು ನೀಡಿದ್ದರನ್ವಯ ಹಣ ವಾಪಸ್ಗೆ ಕಾರಣವಾಗಿದೆ. ಯಾವ ಕಾರಣಕ್ಕೂ ಮೊಬೈಲ್ ಮೂಲಕ ಬ್ಯಾಂಕ್ ಅಥವಾ ಹಣಕಾಸು ವ್ಯವಹಾರ ಮಾಡಬಾರದೆಂದು ಸರ್ಕಾರದಿಂದ ಸಂದೇಶಗಳು ರವಾನೆಯಾಗುತ್ತಿವೆ. ಆದರೂ ಹಣ ಕಳೆದುಕೊಳ್ಳುವವರ ಪ್ರಕರಣ ಮಾತ್ರ ಹೆಚ್ಚಾಗುತ್ತಲೆ ಇವೆ.

## ರೈತರ ದಾಖಲಾತಿಗಳು ಭೂ ಸುರಕ್ಷಾ ಇ – ಖಜಾನೆಯಲ್ಲಿ ಶೇಖರಣೆ – ಜಿ.ಎಚ್ ಶ್ರೀನಿವಾಸ್



ಬಗರ್ ಹುಕುಂ ಸಾಗುವಳಿ ದಾಖಲೆಗಳನ್ನು ಆಪ್ ನಲ್ಲಿ ಮಾಡಬೇಕು ಮತ್ತು ರೈತರಿಗೆ ಪೋಡಿ, ಪಹಣಿ, ನಕಾಶೆ ಎಲ್ಲವೂ ಸಹ ಇ –ಖಜಾನೆ ಯಲ್ಲಿ ಶೇಖರಿಸಲಾಗುವುದು ಎಂದು ಶಾಸಕ ಜಿ ಎಚ್ ಶ್ರೀನಿವಾಸ್ ಹೇಳಿದರು. ಅವರು ಬುಧವಾರ ತರೀಕೆರೆ ತಾಲೂಕು ಕಚೇರಿಯಲ್ಲಿ ಏರ್ಪಡಿಸಿದ್ದ ಭೂ ಸುರಕ್ಷಾ,ಭೂ ದಾಖಲೆಗಳ ಇ – ಖಜಾನೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಸಾರ್ವಜನಿಕರು ಎಲ್ಲಾ ಅರ್ಜಿಗಳನ್ನು ಆನ್ ಲೈನ್ ನಲ್ಲಿ ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡಬೇಕು, ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಹಾಕಬೇಕು, ಇಂದು ಮಾನ್ಯ ಮುಖ್ಯಮಂತ್ರಿಗಳು ರಾಜಧಾನಿಯಲ್ಲಿ ಮತ್ತು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ತಾಲೂಕು ಕೇಂದ್ರಗಳಲ್ಲಿ, ನಾನು ಇಂದು ತರೀಕೆರೆಯಲ್ಲಿ ಇ –ಖಜಾನೆ ಯನ್ನು ಉದ್ಘಾಟನೆ ಮಾಡಿದ್ದು, ಸಾರ್ವಜನಿಕರಿಗೆ ಶಾಶ್ವತವಾಗಿ ದಾಖಲೆಗಳು ಲಭ್ಯವಿರುತ್ತದೆ ಎಂದು ಹೇಳಿದರು. ಸ್ವಾಗತ ಕೋರಿ ಮಾತನಾಡಿದ ಉಪ ವಿಭಾಗ ಅಧಿಕಾರಿ ಡಾ, ಕೆ ಜೆ ಕಾಂತರಾಜ್ ಮಾತನಾಡಿ, ತಾಲೂಕು ಕಚೇರಿಯಲ್ಲಿ ಹಳೆಯ ದಾಖಲಾತಿಗಳು ನಶಿಸಿ ಹೋಗುತ್ತಿವೆ ಇನ್ನು ಮುಂದೆ ಭೂಮಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಂ, ಃ, ಅ, ಆ , ಎಂದು ವರ್ಗೀಕರಿಸಿ ಇ – ಖಜಾನೆಯಲ್ಲಿ ಶೇಖರಿಸುತಿದ್ದೇವೆ ಈಗಾಗಲೇ 73,522 ಕಡತಗಳನ್ನು ಶೇಖರಿಸಲಾಗಿದೆ. ತಹಶೀಲ್ದಾರ್ ಗ್ರೇಡ್ 2 ನೂರುಲ್ಲಾ ಹುದ ರವರು ಹಾಗೂ ಸಿಬ್ಬಂದಿಗಳು ಶ್ರಮಪಟ್ಟು ಈ ಕೆಲಸ ಮಾಡಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪ ತಹಶಿಲ್ದಾರ ರಾದ ಕೃಷ್ಣಮೂರ್ತಿ, ಬಗರ್ ಹುಕುಂ, ಸಕ್ರಮ ಸಮಿತಿ ಸದಸ್ಯರಾದ ಜಗದೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರವಿ ದಳವಾಯಿ, ರೈತ ಸಂಘದ ಮುಖಂಡ ಮಹೇಶ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ರಾಮಚಂದ್ರಪ್ಪ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು**

## ಭಾರತದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ದಿನಾಚರಣೆ

**ಜಮಖಂಡಿ :** ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಮಹಿಳಾ ಸಬಲೀಕರಣ ಘಟಕ ಹಾಗೂ ಐ.ಕ್ಯೂ.ಎ.ಸಿ. ಸಂಯೋಗದೊಂದಿಗೆ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನಾಚರಣೆಯನ್ನು ಜನೇವರಿ 3 ರಂದು ಅದ್ದೂರಿಯಾಗಿ ಆಚರಿಸಲಾಯಿತು. ಪ್ರಾಚಾರ್ಯೆ ಡಾ. ಸುನಂದಾ ಶಿರೂರ ಅವರು ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡುತ್ತ ಅಕ್ಷರದವ್ವ, ಆಧುನಿಕ ಶಿಕ್ಷಣದ ಮಹಾತಾಯಿ, ಭಾರತದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿಯಾದ ಸಾವಿತ್ರಿಬಾಯಿ ಫುಲೆಯವರ ಅವಿರತ ಹೋರಾಟ, ತ್ಯಾಗ ಮತ್ತು ದಕ್ಷತೆಯು ಮಹಿಳೆಯರಿಗೆ ಶಿಕ್ಷಣ ಕ್ಷೇತ್ರದಲ್ಲಿ ಸತ್ಯಾನ್ವೇಷಣೆಗೆ ಮತ್ತು ಸಬಲತೆಗೆ ದಾರಿ ಮಾಡಿಕೊಟ್ಟಿದೆ. ಧಾರ್ಮಿಕ ಕಟ್ಟಳೆಗಳನ್ನು ಮೀರಿ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಲು 1848 ನೇ ಇಸ್ವಿಯ ಜನೇವರಿ ಒಂದರಂದು ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಹೆಣ್ಣು ಮಕ್ಕಳ ಶಾಲೆಯನ್ನು ಪ್ರಾರಂಭಿಸಿದರು. ಶಿಕ್ಷಣವು ಪ್ರಜ್ಞಾವಂತ



ಸಮಾಜದ ಶಕ್ತಿಯಾಗಿದೆ. ವಿದ್ಯಾರ್ಥಿಗಳು ಕೇವಲ ಪಾಠ ಪುಸ್ತಕಗಳಿಗಷ್ಟೇ ಸೀಮಿತವಾಗದೆ ನೈತಿಕತೆ, ಮಾನವೀಯತೆ ಮತ್ತು ಸಮಾಜ ಸೇವೆಯ ಪಾಠಗಳನ್ನು ಸಹ ಕಲಿಯಬೇಕು. ಮಹಿಳಾ ಶಕ್ತಿಯನ್ನು ಉತ್ತೇಜಿಸುವ ಮೂಲಕ ಮತ್ತು ಸಮಾನತೆಯ ಪರಿಕಲ್ಪನೆಗೆ ಉತ್ತೇಜನ ನೀಡುವುದರ ಮೂಲಕ ನಾವು ನೂತನ ಸಮಾಜದ ನಿರ್ಮಾಣ ಮಾಡಬೇಕು. ನಿಮ್ಮ ಧೈರ್ಯ, ಶ್ರದ್ಧೆ, ಮತ್ತು ಪ್ರಯತ್ನವೇ ಯಶಸ್ಸಿನ ಮಾಲಿಕತ್ವಕ್ಕೆ ದಾರಿ ತೋರುತ್ತದೆ. ಆದ್ದರಿಂದ, ನಿಮ್ಮ ಶಿಕ್ಷಣವನ್ನು ಸಾಮಾಜಿಕ ಸೇವೆಯೊಂದಿಗೆ ಜೋಡಿಸಿ, ಸದೃಢ ಮತ್ತು ನೈತಿಕ ಸಮಾಜದ ನಿರ್ಮಾಣದಲ್ಲಿ ಪಾಲ್ಗೊಳ್ಳಿ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಹಿಳಾ ಸಬಲೀಕರಣ ಘಟಕದ ಸಂಯೋಜಕಿಯಾದ ಶ್ರೀಮತಿ ಶೀವಲೀಲಾ ಎಚ್. ಅವರು ಸಾವಿತ್ರಿಬಾಯಿ ಫುಲೆ ಅವರು ಕೇವಲ ಭಾರತದ ಪ್ರಥಮ ಮಹಿಳಾ ಶಿಕ್ಷಕಿಯಾಗಿರದೇ, ಮಹಿಳಾ ಶಿಕ್ಷಣದ ಕ್ರಾಂತಿಕಾರಿಣಿಯಾಗಿಯೂ, ದಮನಿತ ಸಮುದಾಯಗಳಿಗೆ ತೇಜಸ್ವಿ ಬೆಳಕಿನ ಕಣವಾಗಿಯೂ ಪ್ರಸಿದ್ಧರಾಗಿದ್ದಾರೆ. ಅವರ ಪರಿಶ್ರಮ, ಧೈರ್ಯ ಮತ್ತು ಸಮರ್ಪಣೆ ನಮ್ಮನ್ನು ಪ್ರೇರೇಪಿಸುತ್ತವೆ. ಅವರು ಮಹಿಳಾ ಸಬಲೀಕರಣಕ್ಕೆ ಒತ್ತಾಯಿಸಿ, ಶಿಕ್ಷಣದ ಹಕ್ಕು ಮತ್ತು ಸಮಾನತೆಯನ್ನು ಪ್ರತಿಯೊಬ್ಬರಿಗೂ ಸಾಧ್ಯಗೊಳಿಸುವ ಹೋರಾಟ ನಡೆಸಿದರು. ಅವರು ನಮ್ಮೆಲ್ಲರಿಗೂ ಆದರ್ಶವಾಗಿದ್ದಾರೆ. ನಾವು ಸಾವಿತ್ರಿಬಾಯಿಯವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅನುಸರಿಸೋಣ ಮತ್ತು ಸಮಾಜಕ್ಕೆ ಶ್ರೇಷ್ಠ ಸೇವೆ ಸಲ್ಲಿಸೋಣ ಎಂದು ಹೇಳಿದರು.

ಐ. ಕ್ಯೂ. ಎ. ಸಿ. ಸಂಯೋಜಕರಾದ ಡಾ. ವಿ. ಆರ್. ದಳವಾಯಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ. ವೈ. ವೈ. ಕೊಕ್ಕನವರ, ಡಾ. ಎಂ. ಎಸ್. ಹಡಪದ, ಎಸ್. ಪಿ. ಸಜ್ಜನ, ಡಾ. ಎಸ್. ಎನ್. ಮಣಕವಾಡ, ಶ್ರೀಮತಿ ಅನಸೂಯಾ ಮಬ್ರುಮಕರ, ಶ್ರೀಮತಿ ಸುಜಾತಾ ಬಸಪ್ಪಗೋಳ, ಎಸ್. ಬಿ. ತೇರದಾಳ, ಎಸ್. ಬಿ. ಕಾಂಬಳೆ, ವಿ. ಎಮ್. ಹಿಮಕರ, ಎಸ್. ಎಮ್. ಗುಡಿ, ಶ್ರೀಮತಿ ಸುನಂದಾ ಸಣ್ಣಕ್ಕಿ, ಶ್ರೀಮತಿ ಮಹಾದೇವಿ ಬಂಡಿ, ಸಂತೋಷ ಯಡಹಳ್ಳಿ, ಮಹಾನಿಂಗ ಅವಟಿ, ಎಸ್. ಎಮ್. ಪಾಣಿ, ಮೊದಲಾದವರು ಉಪಸ್ಥಿತರಿದ್ದರು.

## ತೋಟದ ರಸ್ತೆಗಳ ಅಭಿವೃದ್ಧಿಗೆ ಚಾಲನೆ

**ತೇರದಾಳ :** ರೈತರಿಗೆ ಬೇಕಾಗುವ ಬೀಜ ಗೊಬ್ಬರ ವಿದ್ಯುತ್, ನೀರು ಹಾಗೂ ರಸ್ತೆಗಳ ಸುಧಾರಣೆಗೆ ಆದ್ಯತೆ ನೀಡಬೇಕು. ರೈತರ ಹಿತಾಸಕ್ತಿಯೇ ಮುಖ್ಯವಾದದ್ದು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಹಾಗೂ ಘಟಪ್ರಭಾ ಇಲಾಖೆಯಡಿ ಪಟ್ಟಣದ ಕಾಲತಿಪ್ಪಿ ರಸ್ತೆಯ ಒಂದನೇ ಕಾಲುವೆ ಹತ್ತಿರದ ತೋಟದ ರಸ್ತೆಗಳ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಾಲ್ಕು ರಸ್ತೆಗಳನ್ನು ನಿರ್ಮಿಸುತ್ತಿದ್ದು, ಅಂದಾಜು 32 ಲಕ್ಷ ಅನುದಾನ ಮಂಜೂರಾಗಿದೆ. ಕ್ಷೇತ್ರದ ಅಭಿವೃದ್ಧಿ ಯೋಜನೆಗಳಿಗಾಗಿ ಸರಕಾರಕ್ಕೆ ಹಲವು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು ಅನುದಾನ ಒದಗಿಸುವ ಭರವಸೆಯನ್ನು ಸರಕಾರ ನೀಡಿದೆ ಎಂದು ತಿಳಿಸಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಮಹಾವೀರ ಕೊಕಟನೂರ, ವಿಜಯಮಹಾಂತೇಶ ನಾಡಗೌಡ, ಪ್ರಭಾಕರ ಬಾಗಿ, ರಾಮಣ್ಣ ಹಿಡಕಲ್, ಅಪ್ಪು



ಮಂಗಸೂಳಿ, ಅಶೋಕ ಅವರಾದಿ, ರಮೇಶ ಕಿತ್ತೂರ, ಶ್ರೀಶೈಲ ಮುಚ್ಚಂಡಿ, ಶ್ರೀಶೈಲ ಮೋಡಿ, ರವಿ ಅವರಾದಿ, ಅಲ್ಲಪ್ಪ ಮದಲಮಟ್ಟಿ, ವರ್ಧಮಾನ ಕಡಹಟ್ಟಿ, ಅಲ್ಲಪ್ಪ ಬಾಬಗೊಂಡ, ಕಾಶಿನಾಥ ರಾಠೋಡ, ಸಚಿನ ಕೊಡತೆ, ಆಕಾಶ ತೇಲಿ, ರಮೇಶ ಪಟ್ಟಣಶೆಟ್ಟಿ, ಈಶ್ವರ ಕಿತ್ತೂರ, ರಾಯಪ್ಪ ಹುದ್ದಾರ, ಕೇದಾರಿ ಪಾಟೀಲ, ಸದಾಶಿವ ಹೊಸಮನಿ, ಈಶ್ವರ ಯಲ್ಲಟ್ಟಿ, ಶೀತಲ ಗೂಳನ್ನವರ ಮತ್ತಿತರರು ಉಪಸ್ಥಿತರಿದ್ದರು.

# ಬ್ರಹ್ಮಾನಂದ ಆಶ್ರಮದಲ್ಲಿ ಭಾರತ ಗ್ಯಾಸ್ ವತಿಯಿಂದ ಸ್ವಚ್ಛತಾ ಆಂದೋಲನ



**ರಬಕವಿ :** ಸ್ವಚ್ಛತಾ ಆಂದೋಲನ ಕೇವಲ ಒಂದು ದಿನದ ಕಾರ್ಯವಾಗದೆ ಅದು ನಿರಂತರವಾಗಿ ನಡೆಯುವಂತಾಗಬೇಕು ಎಂದು ರಬಕವಿ ಬನಹಟ್ಟಿ ಗ್ಯಾಸ್ ಸೇವಾ ಸಂಸ್ಥೆಯ ಮಾಲಿಕ ಮತ್ತು ಕೊಟ್ರಶೆಟ್ಟಿ ಫೌಂಡೇಶನ್ ಅಧ್ಯಕ್ಷ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ತಿಳಿಸಿದರು.

ಜನೇವರಿ 3 ರಂದು ಇಲ್ಲಿಯ ಶ್ರೀ ಗುರು ಬ್ರಹ್ಮಾನಂದ ಆಶ್ರಮದಲ್ಲಿ ತಮ್ಮ ಸಿಬ್ಬಂದಿ ವರ್ಗದವರು ಸ್ವಚ್ಚತಾ ಕಾರ್ಯದಲ್ಲಿ ತೊಡಗಿರುವ ಸಂದರ್ಭದಲ್ಲಿ ಅವರು ಮಾತನಾಡಿದರು.

ನಮ್ಮ ಸಂಸ್ಕೃತಿಯ ಪ್ರತೀಕವಾದ ಮಠ ಮಂದಿರಗಳನ್ನು ಸ್ವಚ್ಛವಾಗಿಟ್ಟು ಕೊಳ್ಳುವಲ್ಲಿ ಪ್ರತಿಯೊಬ್ಬರು ಶ್ರಮಿಸಬೇಕು. ದೇವಸ್ಥಾನ ಮತ್ತು ಮಠಗಳು ಸ್ವಚ್ಛವಾಗಿದ್ದರೆ ಆಗಮಿಸುವ ಭಕ್ತರಿಗೆ ಪ್ರಸನ್ನತೆ ಮೂಡುತ್ತದೆ. ಭಾರತ್ ಗ್ಯಾಸ್ ಸರ್ವಿಸಿನ ಸಿಬ್ಬಂದಿ ವರ್ಗದವರು ಸ್ವಯಂ ಪ್ರೇರಿತವಾಗಿ ಸ್ವಚ್ಛತೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿಶೇಷ ಸಂದರ್ಭದಲ್ಲಿ ರಬಕವಿ –ಬನಹಟ್ಟಿ ನಗರದ ಪ್ರಮುಖ ಪ್ರದೇಶಗಳನ್ನು ಸ್ವಚ್ಚ ಗೊಳಿಸುವದು ಕೂಡ ಹೆಮ್ಮೆಯ ಸಂಗತಿಯಾಗಿದೆ ಎಂದು ಕೊಟ್ರಶೆಟ್ಟಿ ತಿಳಿಸಿದರು.

ಈ ಸ್ವಚ್ಛತಾ ಅಭಿಯಾನದಲ್ಲಿ ಸಂಗಮೇಶ ಗುಣಕಿ, ಕಲ್ಲಯ್ಯ ಮುಧೋಳ, ಪ್ರಭು ಮಳಗಲಿ, ಝುಬ್ಬೆರ ಫನೀಬಂದ, ಬಸು ಅಥಣಿ, ವಿಠ್ಠಲ ಬಾವಂಜಿ, ವಿಠ್ಠಲ ಗಾಯಕವಾಡ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

ಪೂಜ್ಯಶ್ರೀ ಗುರುಸಿದ್ದೇಶ್ವರ ಸ್ವಾಮೀಜಿಯವರು ಈ ಸ್ವಚ್ಛತಾ ಸೇವೆಗೈದ ಭಾರತ್ ಗ್ಯಾಸ್ ಸಿಬ್ಬಂದಿಯನ್ನು ಪ್ರಶಂಶಿಸಿ ಆಶೀರ್ವದಿಸಿದರು.

# ಬಾಣಂತಿಯರ ಸಾವು ಖಂಡಿಸಿ ಬಿಜೆಪಿಯಿಂದ ಪ್ರತಿಭಟನೆ




**ಬಾಗಲಕೋಟೆ :** ಬಾಣಂತಿಯರ ಸರಣಿ ಸಾವಿನ ನೈತಿಕ ಹೋಣೆ ಹೊತ್ತು ಆರೋಗ್ಯ ಸಚಿವರು ರಾಜಿನಾಮೆ ನೀಡಬೇಕು, ಬಾಣಂತಿಯ ಸುರಕ್ಷತೆ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಬಸವೇಶ್ವರ ವೃತ್ತದಲ್ಲಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ ಶುಕ್ರವಾರ ಹಮ್ಮಿಕೊಂಡ ಬಾಣಂತಿಯರ ಸರಣಿ ಸಾವು ಕುರಿತು ಸರಕಾರದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.

ಅವರು ಬಡವರು ಜಾಸ್ತಿ ಜನ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗುತ್ತಾರೆ, ಸರಕಾರಿ ಆಸ್ಪತ್ರೆಗಳಲ್ಲಿಯಾವುದೆರೀತಿಯಮೇಡಿಕಲ್ ಸೌಲಭ್ಯಗಳಿರುವುದಲ್ಲಾ, ಸೌಲಭ್ಯ ವಂಚಿತ ತಾಯಂದಿರುಅವರಿಗೆಸಕಾಲಕ್ಕೆವೈದ್ಯಕೀಯ ಉಪಲಬ್ದತೆ ಸಿಗದಿರುವ ಕಾರಣ ಅತಿ ಹೆಚ್ಚು ಜನ ಬಾಣಂತಿಯರ ಸಾವು ಕರ್ನಾಟಕದಲ್ಲಿ ನೋಡುತ್ತಿದ್ದವೆ, ಹಿಂದೆ ಎಂದು ಈ ರೀತಿ ಸಾವುಗಳನ್ನು ಖಂಡಿದಿಲ್ಲಾ, ಸರಕಾರ ಇದರ ಬಗ್ಗೆ ಗಂಭೀರ ಕ್ರಮ ತೆಗೆದುಕೋಳ್ಳದ ಕಾರಣ ಇಂದು ಅನಿವಾರ್ಯವಾಗಿ ರಾಜ್ಯದ ಎಲ್ಲ ತಾಲೂಕುಗಳಲ್ಲಿ ಭಾರತೀಯ ಜನತಾ ಪಾರ್ಟಿ ಮಹಿಳಾ ಮೋರ್ಚಾ ಪ್ರತಿಭಟಣೆ ಮಾಡುತ್ತಿದೆ, ಕೂಡಲೆ ಬಾಣಂತಿಯರ ಸಾವಿಗಿ ಸರಕಾರ ನೈತಿಕ ಹೋಣೆ ಹೊತ್ತು ಆರೋಗ್ಯ ಮಂತ್ರಿ ಕೂಡಲೆ ರಾಜಿಮನಾಮೆ ಕೊಡಬೇಕು, ಮುಂದೆ ಭಾಣಂತಿಯರ ಸುರಕ್ಷತೆಗೆ ಸರಕಾರ ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಡಾ.ವಿಜಯಲಕ್ಷ್ಮೀ ತುಂಗಳ ಮಾತನಾಡಿ ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವಾಗುತ್ತಿದ್ದರೂ ಕಾಂಗ್ರೆಸ್ಸ ಸರ್ಕಾರ ಮಾತ್ರ ಇನ್ನೂ ನಿದ್ರೆಯಿಂದ ಎಚ್ಚರವಾಗಿಲ್ಲಾ, ಕಾಂಗ್ರೆಸ್ಸ ಸರ್ಕಾರದ ಆಡಳಿತದಲ್ಲಿ ರಾಜ್ಯದ ಸರ್ಕಾರಿಆಸ್ಪತ್ರೆಗಗಳುಶವಾಗಾರವಾಗುತ್ತಿವೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರೂ ಕೂಡಲೇ ರಾಜಿನಾಮೆ ನೀಡಿ ತನಿಖೆ ಎದುರಿಸಬೇಕೆಂದು ಆಗ್ರಹಿಸಿದರು.

ಇದಕ್ಕೂ ಮುಂಚೆ ಬಿಜೆಪಿ ಕಾರ್ಯಾಲಯದಿಂದ ಬಸವೇಶ್ವರ ವೃತ್ತದ ವರೆಗೂ ಪಾದಯಾತ್ರೆ ಮೂಲಕ ಆಗಮಿಸಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಸಿ ಪ್ರತಿಭಟನೆ ಮಾಡಲಾಯಿತು.

ಪ್ರತಿಭಟಣೆಯಲ್ಲಿ, ಜಿಲ್ಲಾ ಮಹಿಳಾ ಮೋರ್ಚಾ ಆಧ್ಯಕ್ಷೆ ಡಾ. ಸುಮೇದಾ ಮಾನೆ, ರಾಜ್ಯ ಉಪಾಧ್ಯಕ್ಷೆ ಡಾ.ವಿ–ಜಯಲಕ್ಷ್ಮೀ ತುಂಗಳ, ಭಾಗ್ಯಾ ಹುದ್ನೂರ, ವೈಷ್ಣವಿ, ಬಾಗೇವಾಡಿ, ಸುಜಾತಾ ಶಿಂದೆ, ಭಾಗಿರತಿ ಪಾಟೀಲ,ನಗರಸಭೆ ಅಧ್ಯಕ್ಷೆ ಸವಿತಾ ಲಂಕೇನ್ನವರ, ಕಾವೇರಿ ರಾಥ–ೋಡ. ಗೀತಾ ಸೂರ್ಯವಂಶಿ, ಶಶಿಕಲಾ ಮಜ್ಜಗಿ, ಪಾರ್ವತಿ ಹುಗ್ಗಿ, ಸಾವಿತ್ರಿ ಜೋಗುರ, ಶಿವಲೀಲಾ ಪಟ್ಟಣಶೆಟ್ಟಿ,ಡಾ. ಎಂ.ಎಸ್.ದಡ್ಡೆನ್ನವರ,ರಾಜು ನಾಯ್ಕರ, ಸತ್ಯನಾರಾಯಣ ಹೆಮಾದ್ರಿ, ಸುರೇಶ ಕೋಣ್ಣುರ, ಗುಂಡುರಾವ ಶಿಂದೆ ಬಸವರಾಜ ಹುನಗುಂದ.ಉಮೇಶ ಹಂಚಿನಾಳ.ಸೇರದಂತೆ ಅನೇಕ ಜನ ಕಾರ್ಯಕರ್ತರು ಭಾಗವಹಿಸಿದ್ದರು.

# ಸಿದ್ಧೇಶ್ವರ ಶ್ರೀಗಳಿಗೆ ನುಡಿ ನಮನ:

## ನಿಸ್ವಾರ್ಥ ಬದುಕಿನ ದಾರಿದೀಪ ಸಿದ್ಧೇಶ್ವರ ಶ್ರೀ



**ತೇರದಾಳ :** ಮನುಷ್ಯನಾದವನು ನಿಸ್ವಾರ್ಥದಿಂದ ಬದುಕಿದಾಗ ಸಾಧನೆಯ ಶಿಖರ ಏರಲು ಹಾಗೂ ಮೋಕ್ಷ ಹೊಂದಲು ಸಾಧ್ಯ ಎಂಬುದನ್ನು ನಡೆದಾಡುವ ದೇವರು ಎಂದೇ ಭಕ್ತರ ಮನೆ ಮನದಲ್ಲಿ ನೆಲೆಸಿರುವ ಸಿದ್ದೇಶ್ವರ ಶ್ರೀಗಳು ನಮಗೆಲ್ಲ ದಾರಿದೀಪವಾಗಿದ್ದಾರೆಂದು ಯುವ ಮುಖಂಡ ಅಲ್ಲಪ್ಪ ಇಂಗಳಗಿ ಹೇಳಿದರು.

ಇಲ್ಲಿನ ಕಲ್ಲಟ್ಟಿ ಗಲ್ಲಿಯ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಸಿದ್ಧೇಶ್ವರ ಶ್ರೀಗಳಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಧ್ಯಾತ್ಮದ ಪ್ರವಚನ ಮೂಲಕವೇ ಸಮಾಜದ ಒಳಿತಿಗಾಗಿ ಶ್ರಮಿಸಿದ ಶ್ರೀಗಳು ನಮ್ಮ ಭಾಗದವರು ಎಂಬುವುದು ಕೂಡ ಒಂದು ಹೆಮ್ಮೆಯ ವಿಷಯ. ಸಿದ್ಧೇಶ್ವರ ಶ್ರೀಗಳ ಆದರ್ಶ ಮತ್ತು ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಕಾಶ ಪಾಗಾದ, ಪ್ರವೀಣ ಖವಾಸಿ, ಸಂಗಮೇಶ ಸಣ್ಣಪೇಟೆ, ನಾಗಪ್ಪ ಹೊಸಮನಿ ಇನ್ನಿತರರು ಭಾಗವಹಿಸಿದ್ದರು.

# ಕರುಣಾಸಾಗರ ಗುರುದೇವ ಧ್ವನಿ ಸುರುಳಿ ಬಿಡುಗಡೆ

## ಧರ್ಮದಿಂದ ನಡೆದರೆ ಜೀವನ ಸಾರ್ಥಕ: ಕಾಡಸಿದ್ದೇಶ್ವರ ಶ್ರೀ




**ಗುಳೇದಗುಡ್ಡ :** ಲಿಂ.ಕಾಡಸಿದ್ದೇಶ್ವರ ಶ್ರೀಗಳು ಸದಾ ಮೌನಯೋಗಿಗಳಾಗಿ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಭಕ್ತರ ಮನದಲ್ಲಿ ಶಾಶ್ವತವಾಗಿ ನೆಲೆಸಿರುವ ಕಾಡಸಿದ್ದೇಶ್ವರ ಶ್ರೀಗಳು ನಡೆದಾಡುವ ದೇವರೆಂದೆ ಕರೆಸಿಕೊಂಡಿದ್ದರು. ಅವರ ಮುಗ್ಧ ಮನಸ್ಸು ಭಕ್ತ ಮನ ಗೆದ್ದಿದೆ. ಅವರ ನಡೆದು ಬಂದ ದಾರಿ, ಚರಿತ್ರೆ ಹಾಗೂ ಸಮಾಜ–ಕ್ಕೆ ನೀಡಿದ ಅವರ ಕೊಡುಗೆ ಕುರಿತು ಗೀತೆಗಳ ಧ್ವನಿ ಸುರುಳಿ ಬಹಳಷ್ಟು ವಿಶೇಷತೆಯಿಂದ ಕೂಡಿದೆ ಎಂದು ಶ್ರೀಅಭಿನವ ಕಾಡಸಿದ್ದೇಶ್ವರ ಶ್ರೀಗಳು ಹೇಳಿದರು.

ಅವರು ಪಟ್ಟಣದ ಶ್ರೀಮರಡಿಮಠದಲ್ಲಿ ಲಿಂ. ಕಾಡಸಿದ್ದೇಶ್ವರ ಶ್ರೀಗಳ 86ನೇ ಜನ್ಮದಿನಾಚರಣೆ ಹಾಗೂ ಅವರ 5ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಲಿಂ. ಶ್ರೀಕಾಡಸಿದ್ದೇಶ್ವರ ಮಹಾಸ್ವಾಮಿಗಳ ಕುರಿತಾಗಿ ರಚಿಸಿದ ಕರುಣಾಸಾಗರ ಗುರುದೇವ ಎಂಬ ಭಕ್ತಿಗೀತೆಗಳ ಧ್ವನಿ ಸುರುಳಿ ಬಿಡುಗಡೆಗೊಳಿಸಿ ಮಾತನಾಡಿ, ಧರ್ಮ, ಸಂಸ್ಕೃತಿ, ಸಂಸ್ಕಾರ ಮನುಷ್ಯನನ್ನು ಬಹಳಷ್ಟು ಎತ್ತರಕ್ಕೆ ಬೆಳೆಸುತ್ತದೆ. ಪ್ರತಿಯೊಬ್ಬರ ಧರ್ಮದ ಹಾದಿಯಲ್ಲಿ ನಡೆದರೆ ಬದುಕು ಸುಂದರವಾಗುತ್ತದೆ ಎಂದರು.

ಕರುಣಾಸಾಗರ ಗುರುದೇವ ಭಕ್ತಿಗೀತೆಗಳ ಧ್ವನಿ ಸುರುಳಿ ರಂಗನಾಥ ಅಂಬಿಗೇರ, ಪ್ರಭುಲಿಂಗಯ್ಯ ಹಿರೇಮಠ ಸಾಹಿತ್ಯ, ವೆಂಕಟೇಶ ಅಲ್ಕೊಂಡ ಅವರ ಸಂಗೀತ ಮತ್ತು ಗಾಯನ. ಶಂಕರ ಶಾನುಭಾಗ, ರಕ್ಷಾ ಅರವಿಂದ, ಗುರುಕಿರಣ ಹೆಗಡೆ, ಸುಪ್ರಿಯಾ ಆಚ–ಾರ್ಯ, ಪಂ.ವೆಂಕಟೇಶ ಆಲ್ಕೊಂಡ್, ಅನುರಾಧಾ ಭಟ್, ಮೆಹಬೂಬ್ ಸಾಬ, ಸ್ರೋತಸ್ವಿನಿ ಡಬೀರ್ ಅವರು ವಿವಿಧ ಭಕ್ತಿ ಗೀತೆಗಳನ್ನು ಹಾಡಿದ್ದಾರೆ.

ಈ ಕರುಣಾಸಾಗರ ಗುರುದೇವ ಭಕ್ತಿಗೀತೆಗಳ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ನಾಗೇಶಪ್ಪ ಪಾಗಿ, ರವಿಂದ್ರ ಗೌಡರ, ಗೌರಿಶಪ್ಪ ಭಾವಿ, ಶಿವಕುಮಾರ ತೊಗರಿ, ಚಂದ್ರಶೇಖರ ತಾಂಡೂರ, ಚಿನ್ನು ಬಾರಾಟಿಕ್ಕಿ, ಶಿವಾನಂದ ಜವಳಿ, ತಿಮ್ಮಾಸಾಗರ, ಚಿಕ್ಕನರಗುಂದ, ಅಲ್ಲೂರ, ಪಾದನಕಟ್ಟಿ, ಮುಳ್ಳೂರು, ಕಳಕಾಪೂರ, ಕಮತಗಿ ಸೇರಿದಂತೆ ವಿವಿಧ ಭಾಗಗಳ ಶಾಖಾ ಮಠದ ಭಕ್ತರು ಪಾಲ್ಗೊಂಡಿದ್ದರು.

# ಸಂಭ್ರಮದ ಸಾಯಿಬಾಬಾ ಕಾರ್ತಿಕೋತ್ಸವ



**ಮಹಾಲಿಂಗಪುರ :** ಪಟ್ಟಣದ ಕೆಂಗೇರಿ ಮಡ್ಡಿಯ ಸಾಯಿ ಮಂದಿರದಲ್ಲಿ ಗುರುವಾರ ಸಾಯಿಬಾಬಾರ ಕಾರ್ತಿಕೋತ್ಸವವು ಸಂಭ್ರಮ ಸಡಗರದಿಂದ ನಡೆಯಿತು. ಕಾರ್ತಿಕೋತ್ಸವ ನಿಮಿತ್ಯ ಸಾಯಿಬಾಬಾರ ಮೂರ್ತಿಗೆ ಅಭಿಷೇಕ, ವಿಶೇಷ ಅಲಂಕಾರ ಮಾಡಿ ಪೂಜಿಸಲಾಗಿತ್ತು. ಮುಂಜಾನೆಯಿಂದ ಸಂಜೆಯವರೆಗೆ ಸಾವಿರಾರು ಭಕ್ತರು ಆಗಮಿಸಿ ದರ್ಶನ ಮಾಡಿದರು.

ಸಂಜೆ ದೇವಸ್ಥಾನದ ಆವರಣದಲ್ಲಿನ ಪಣತಿಗಳಿಗೆ ಭಕ್ತರು ಎಣ್ಣೆಹಾಕಿ ದೀಪ ಬೆಳಗಿಸಿ ಕಾರ್ತಿಕೋತ್ಸವ ಆಚರಿಸಿದರು. ಕಾರ್ತಿಕೋತ್ಸವದ ನಿಮಿತ್ಯ ಭಕ್ತರಿಗಾಗಿ ಮಧ್ಯಾಹ್ನ ಮತ್ತು ಸಂಜೆ ಅನ್ನದಾಸೋಹ ಜರುಗಿತು.

ದೇವಸ್ಥಾನದ ಅರ್ಚಕರಾದ ಮಹಾಲಿಂಗ ಮರೆಗೊಂಡ, ಸಿಂಧೂರ ಮರೆಗೊಂಡ, ಸದ್ಭಕ್ತರಾದ ಪ್ರಕಾಶ ರಾಮೋಜಿ, ರಾಜು ಮೂಲಿಮನಿ, ಗಣೇಶ ಕುರಬೇಟ, ಹಣಮಂತ ಮೀರಾಪಟ್ಟಿ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.



# ಕಾರ್ಮಿಕರಿಗೆ ಉಚಿತ ಚರ್ಮರೋಗ ತಪಾಸಣಾ ಶಿಬಿರ



**ಕೊಪ್ಪಳ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಕಛೇರಿ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಅಬಯ ಸಾಲ್ವೆಂಟ್ ರೈಸ್ ಮಿಲ್ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಉಚಿತ ಚರ್ಮರೋಗ ತಪಾಸಣಾ ಶಿಬಿರ ಹಾಗೂ ಜಾಗೃತಿ ಕಾರ್ಯಕ್ರಮ ಶುಕ್ರವಾರದಂದು ನಡೆಯಿತು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಪ್ರಕಾಶ ಹೆಚ್ ಅವರು ಮಾತನಾಡಿ ಯಾರಿಗಾದರೂ ಮೈ ಮೇಲೆ ತಿಳಿ–ಬಿಳಿ ತಾಮ್ರವರ್ಣದ ಸ್ಪರ್ಶಜ್ಞಾನವಿಲ್ಲದ 5 ಅಥವಾ 5ಕ್ಕಿಂತ ಹೆಚ್ಚು ಮಚ್ಚೆಗಳು ಇದ್ದರೆ, ಪಾದಗಳ ದೌರ್ಬಲ್ಯ, ಬೆರಳುಗಳ ದೌರ್ಬಲ್ಯ, ತ್ವಚೆಯ ಮೇಲೆ ಕೆಂಪಾದ ಬಾವು, ಕಣ್ಣು ಮುಚ್ಚುವಲ್ಲಿ ತೊಂದರೆ ಕಾಣಿಸಿಕೊಂಡರೆ, ಇವು ಕುಷ್ಠರೋಗದ ಲಕ್ಷಣಗಳಾಗಿರಬಹುದು. ಇಂತಹ ಲಕ್ಷಣಗಳು ಯಾರಿಗಾದರು ಕಾಣಿಸಿಕೊಂಡರೆ, ತಕ್ಷಣ ನಿಮ್ಮ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಥವಾ ಆರೋಗ್ಯ ಸಿಬ್ಬಂದಿಗಳಲ್ಲಿ ಪರೀಕ್ಷಿಸಿಕೊಂಡು, ಖಚಿತ ಪಟ್ಟರೆ ಉಚಿತವಾಗಿ ಚಿಕಿತ್ಸೆ ಪಡೆಯಿರಿ. ಇದಕ್ಕೆ ಯಾರು ಹಿಂಜರಿಯಬಾರದು, ಇದು ಮೈಕ್ರೊಬ್ಯಾಕ್ಟಿರಿಯಾ ಲೆಪ್ರೈ ಎಂಬ ಸೂಕ್ಷ್ಮಾಣುವಿನಿಂದ ಗಾಳಿ ಮೂಲಕ ಹರಡುತ್ತದೆ. ಇದೊಂದು ಸಾಂಕ್ರಾಮಿಕ ರೋಗವಾಗಿದೆ. ರೋಗಿಯು ಕೆಮ್ಮುವುದರ ಮೂಲಕ ಮತ್ತು ಸೀನುವುದರ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಪ್ರಸಾರವಾಗುತ್ತದೆ. ಇದು ಖಂಡಿತ ವಾಸಿಯಾಗುವಂತಹ ಖಾಯಿಲೆಯಾಗಿದ್ದು, ನಿರ್ಲಕ್ಷ್ಯತೆ ಮಾಡದೆ ತಮ್ಮ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಪರೀಕ್ಷಿಸಿಕೊಳ್ಳಿ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಪ್ಹಿ.ಪಿ, ಮಾತನಾಡಿ ಕುಷ್ಠರೋಗ ಯಾವುದೇ ದೇವರ ಶಾಪ ಹಾಗೂ ಪಾಪ ಮಾಡವುದುರಿಂದ ಬರುವುದಿಲ್ಲ. ಇದು ಮೈಕ್ರೊಬ್ಯಾಕ್ಟಿರಿಯಾ ಲೆಪ್ರೈ ಎಂಬ ಸೂಕ್ಷ್ಮಾಣುವಿನಿಂದ ಹರಡುತ್ತದೆ. ಇದಕ್ಕೆ ಸಂಪೂರ್ಣವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಇದಕ್ಕೆ ಯಾರೂ ಭಯಪಡುವ ಅಗತ್ಯವಿಲ್ಲ. ಚರ್ಮದ ಯಾವುದೇ ಖಾಯಿಲೆ ಇದ್ದರು ತಮ್ಮ ಮನೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿದಾಗ ಪರೀಕ್ಷಿಸಿಕೊಳ್ಳುವಂತೆ ಸಲಹೆ ನೀಡಿದರು.

ಬಳಿಕ ರೈಸ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು ಹಾಗೂ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಾ. ಮಹೇಶ ಆಯುಷ್ ವೈದ್ಯರು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ ಕೆ, ಮೇಲ್ವಿಚಾರಕರಾದ ವೀರಭದ್ರಪ್ಪ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಜಯಪ್ರಕಾಶ, ಪರಶುರಾಮ, ರಾಜಶೇಖರ, ದಾನನಗೌಡ ಎಸ್.ಟಿ.ಎಸ್ ಇಬ್ರಾಹಿಂಸಾಬ್, ರಾಘವೇಂದ್ರ ಸೇರಿದಂತೆ ಇತರರು ಇದ್ದರು.

# ಸೇವಾ ನ್ಯೂನತೆ: ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು ಪ್ರಕಟ

**ಕೊಪ್ಪಳ :** ಫಿರ್ಯಾದುದಾರ ಗ್ರಾಹಕರಿಗೆ ಎದುರುದಾರ ಮಣಪ್ಪುರಂ ಗೋಲ್ಡ್ ಪೈನಾನ್ಸ್ ವತಿಯಿಂದ ಉಂಟಾದ ಸೇವಾ ನ್ಯೂನತೆ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ತೀರ್ಪು ಪ್ರಕಟಿಸಲಾಗಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 60/2024 ರಲ್ಲಿ 2024ರ ಡಿಸೆಂಬರ್ 30 ರಂದು ನೀಡಿದ ಅಂತಿಮ ತೀರ್ಪಿನ ಸಾರಾಂಶದ ಅನ್ವಯ ಫಿರ್ಯಾದುದಾರರಾದ ಹಿರೇಬಸಪ್ಪ ತಂದೆ ದಿ:ಶಂಕ್ರಪ್ಪ ಸಾ:ಬೇವೂರ್, ತಾ:ಯಲಬುರ್ಗಾ ಇವರು ತನ್ನ ವ್ಯವಸಾಯದ ಕೆಲಸಕಾರ್ಯಗಳಿಗೆ ಹಣದ ಅವಶ್ಯಕತೆ ಇರುವುದರಿಂದ 2024ರ ಮೇ 01 ರಿಂದ 03 ರವರೆಗೆ ಮೂರು ಹಂತಗಳಲ್ಲಿ ಒಟ್ಟು 62.7 ಗ್ರಾಂ ಬಂಗಾರದ ಆಭರಣಗಳನ್ನು ಮಣಪ್ಪುರಂ ಗೋಲ್ಡ್ ಪೈನಾನ್ಸ್ ಯಲಬುರ್ಗಾ ಇವರಲ್ಲಿ ಅಡವಿಟ್ಟು ರೂ. 2,84,000 ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ದೂರುದಾರರಾದ ಹಿರೇಬಸಪ್ಪ ರವರು ಈ ಅಸಲು ಮತ್ತು ಬಡ್ಡಿಯನ್ನು ಮಣಪ್ಪುರಂ ಗೋಲ್ಡ್ ಪೈನಾನ್ಸ್ ರವರಿಗೆ ಮರುಪಾವತಿ ಮಾಡಿ ತಾನು ಅಡವಿಟ್ಟ ಬಂಗಾರದ ಆಭರಣಗಳನ್ನು ಹಿಂದಿರುಗಿಸುವಂತೆ ಕೇಳಿಕೊಂಡಿರುತ್ತಾರೆ. ಮಣಪ್ಪುರಂ ಗೋಲ್ಡ್ ಪೈನಾನ್ಸ್ ರವರು ಆಡವಿಟ್ಟ ಆಭರಣಗಳನ್ನು ಹಿಂದಿರುಗಿಸದೇ ಸೇವಾ ನ್ಯೂನತೆಯನ್ನು ಎಸಗಿದ್ದು ಆಭರಣಗಳನ್ನು ಮರಳಿಸದೇ ವಿನಾಕಾರಣ ದಿನಗಳನ್ನು ಮುಂದೂಡುತ್ತಾ ಬಂದಿರುತ್ತಾರೆ. ದೂರುದಾರನು ವಕೀಲರ ಮೂಲಕ ನೋಟಿಸ್ ನೀಡಿದಾಗ್ಯೂ ಸಹ ಸ್ಪಂದಿಸದೇ ನಿರ್ಲಕ್ಷ್ಯ ತೋರಿರುತ್ತಾರೆ. ದೂರುದಾರರು ಎದುರುದಾರರ ವರ್ತನೆಯಿಂದ ಬೇಸತ್ತು ಎದುರುದಾರರಾದ ಮಣಪ್ಪುರಂ ಗೋಲ್ಡ್ ಪೈನಾನ್ಸ್‌ರವರ ವಿರುದ್ಧ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ದೂರನ್ನು ದಾಖಲಿಸಿಕೊಂಡ ಕೊಪ್ಪಳ ಜಿಲ್ಲಾ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ವಾದ ಪ್ರತಿವಾದಗಳನ್ನು ಆಲಿಸಿ, ಎದುರುದಾರರಿಂದ ಉಂಟಾದ ಸೇವಾ ನ್ಯೂನತೆಗಾಗಿ ಎದುರುದಾರ ಮಣಪ್ಪುರಂ ಗೋಲ್ಡ್ ಪೈನಾನ್ಸ್‌ರವರು ದೂರುದಾರರು ಅಡವಿಟ್ಟ ಬಂಗಾರದ ಆಭರಣಗಳನ್ನು 30 ದಿನಗಳ ಒಳಗಾಗಿ ಹಿಂದಿರುಗಿಸುವಂತೆ ಹಾಗೂ ದೂರುದಾರನಿಂದ ಪಡೆದ ಮೊತ್ತ ರೂ. 2,84,000 ಗಳಿಗೆ ವಾರ್ಷಿಕ ಶೇ 6 ಬಡ್ಡಿಯನ್ನು ಮಾತ್ರ ಎದುರುದಾರರಿಗೆ ಸಾಲ ಮರುಪಾವತಿ ದಿನದಿಂದ ದೂರುದಾರರಿಗೆ ನೀಡುವಂತೆ ಆದೇಶಿಸಿರುತ್ತಾರೆ ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ ರೂ. 5,000 ಗಳನ್ನು ಹಾಗೂ ದೂರಿನ ಖರ್ಚು ರೂ. 5000 ಗಳನ್ನು ಎದುರುದಾರರು ದೂರುದಾರರಿಗೆ ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿ ಪಿ.ಎಸ್ ಅಮರದೀಪ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಹಿಂದ ಜಿಲ್ಲಾ ಕಾರ್ಯಾಧ್ಯಕ್ಷರಾಗಿ ಮಾಯಣ್ಣವರ ನೇಮಕ

**ಚಿಮ್ಮಡ :** ಅಲ್ಪಸಂಖ್ಯಾತ, ಹಿಂದುಳಿದ ವರ್ಗ, ದಲಿತ (ಅಹಿಂದ) ಸಂಘಟನೆಯ ಜಿಲ್ಲಾ ಸಂಘಟನಾ ಕಾರ್ಯಾಧ್ಯಕ್ಷರನ್ನಾಗಿ ಸ್ಥಳಿಯ ಗ್ರಾಮ ಪಂಚಾಯತ್ ಸದಸ್ಯ ಮಹಾಲಿಂಗ ಮಾಯಣ್ಣವರ ಅವರನ್ನು ನೇಮಕಗೊಳಿಸಲಾಗಿದೆ ಎಂದು ರಾಜ್ಯ ಕಾರ್ಯಾಧ್ಯಕ್ಷ ಸಿ. ಎಂ. ಕರಡಿಕೊಪ್ಪ, ರಾಜ್ಯಾಧ್ಯಕ್ಷ ಪ್ರಭುಲಿಂಗ ದೊಡ್ಡಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಲವಾರು ವರ್ಷಗಳಿಂದ ರಾಜಕೀಯ ಪಕ್ಷಗಳಲ್ಲಿ ಕಾರ್ಯಕರ್ತರಾಗಿ ದುಡಿಯುತ್ತಿರುವ ಅಹಿಂದ ವರ್ಗದ ಯುವಕರಿಗೆ ರಾಜಕೀಯ ಸ್ಥಾನಮಾನ ನೀಡುವ ಉದ್ದೇಶದಿಂದ ರಚಿಸಲಾಗಿರುವ ಸಂಘಟನೆಯಲ್ಲಿ ರಚನಾತ್ಮಕವಾಗಿ ತೊಡಗಿಕೊಳ್ಳುವ ಯುವಕರಿಗೆ ಭವಿಷ್ಯದ ದಿನಗಳಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ ಎಂದು ಅವರು ತಿಳಿಸಿದ್ದಾರೆ.

# ಸಾವಿತ್ರಿ ಬಾಯಿ ಘುಲೆ ಅವರ ವೃತ್ತದಲ್ಲಿ ಹಮ್ಮಿಕ್ಕೊಂಡ ಸಾವಿತ್ರಿ ಬಾಯಿ ಘುಲೆ ಅವರ 194 ನೇ ಜಯಂತ್ಯೋತ್ಸವ ಆಚರಣೆ



**ಹಳ್ಳೂರ :** ಹೆಣ್ಣು ಮಕ್ಕಳಿಗೆ 19 ನೇ ಶತಮಾನದಲ್ಲಿ ಹಿಂದುಳಿದ ವರ್ಗಗಳ ಜನರಿಗೆ ಶಿಕ್ಷಣ ನೀಡುತ್ತಿರಲಿಲ್ಲ ಮಹಿಳಾ ಹಕ್ಕುಗಗಳು ಅನಕ್ಷರತೆ ಅಸ್ಪೃಶ್ಯತೆ, ಸತಿ ಬಾಲ್ಯ ವಿವಾಹ, ಇತ್ಯಾದಿ ಅನಿಷ್ಟ ಪದ್ಧತಿಗಳ ಬಗ್ಗೆ ದಿಟ್ಟತನದಿಂದ ದ್ವನಿ ಎತ್ತಿ ಹೋರಾಡಿ ಶಿಕ್ಷಣ ನೀಡಿದ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಘುಲೆ ಅವರು ಎಂದು ಶಿಕ್ಷಕಿ ಶಶಿಕಲಾ ಬಾಳೆಂಬಿಡ ಹೇಳಿದರು. ಅವರು ಗ್ರಾಮದ ಸಾವಿತ್ರಿ ಬಾಯಿ ಘುಲೆ ಅವರ ವೃತ್ತದಲ್ಲಿ ಹಮ್ಮಿಕ್ಕೊಂಡ ಸಾವಿತ್ರಿ ಬಾಯಿ ಘುಲೆ ಅವರ 194 ನೇ ಜಯಂತ್ಯೋತ್ಸವ ಆಚರಣೆಲ್ಲಿ ಮಾತನಾಡುತ್ತಾ ಮಹಿಳೆಯರು ಅಬಲೆಯಲ್ಲ ಸಬಲೆ ಎಂದು ತೋರಿಸಿಕೊಟ್ಟ ಮಹಾಮಾತೆ ಸಾವಿತ್ರಿ ಬಾಯಿ ಘುಲೆ ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಾಗೊನಾ ಎಂದು ಹೇಳಿದರು.

ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಮಾತನಾಡಿ ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಗೆ ಹಗಲಿರುಳು ಶ್ರಮಿಸಿ ಶಿಕ್ಷಣದ ಕ್ರಾಂತಿಯ ಹರಿಕಾರರಾಗಿ ಮಹಿಳೆಯರನ್ನು ಸ್ವಾವಲಂಬಿ ಜೀವನ ನಡೆಸಲು ಅವಕಾಶ ಮಾಡಿಕೊಟ್ಟವರು ಶಿಕ್ಷಣ ಕಲಿಸಲು ದಾರಿಯಲ್ಲಿ ಹೊರಟಾಗ ಕೆಟ್ಟ ಜನ ಸಗಣೆ ಎರಚಿ ನಿಂದಿಸಿ ಅವಮಾನ ಮಾಡಿದರೂ ಹೆದರದೆ ಮುಚ್ಚು ಮರೆಯಿಲ್ಲದೆ ದಿಟ್ಟತನದಿಂದ ದ್ವನಿ ಎತ್ತಿ ಶಿಕ್ಷಣ ನೀಡಿ ಅಂಧಕಾರವನ್ನು ಕಳೆದು ಜ್ಞಾನದ ಬೆಳಕು ನೀಡಿದ ಸಾವಿತ್ರಿ ಬಾಯಿ ಘುಲೆ ಅವರ ಕೊಡುಗೆ ಅಪಾರವಾದದ್ದು ಎಂದು ಹೇಳಿದರು. ಪ್ರಾರಂಭದಲ್ಲಿ ಸಾವಿತ್ರಿ ಬಾಯಿ ಘುಲೆ ಮಹಿಳಾ ಮಂಡಳ ಉಪಾಧ್ಯಕ್ಷೆ ಕಸ್ತೂರಿ ನಿಡೋಣಿ ಹಾಗೂ ಶಾಲೆಯ ಶಿಕ್ಷಕಿಯರು ಸಾವಿತ್ರಿ ಬಾಯಿ ಘುಲೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಈ ಸಮಯದಲ್ಲಿ ಪ್ರಧಾನ ಗುರುಗಳಾದ ಎಸ್ ಎಚ್ ವಾಸನ.ಭೀಮಶಿ ಮಗದುಮ.ಸಿದ್ದಪ್ಪ ಕೂಲಿಗೋಡ. ಯಮನಪ್ಪ ನಿಡೋಣಿ.ಮಾದೇವ ಹೊಸಟ್ಟಿ.ಹನಮಂತ ಹಳ್ಳೂರ. ಅಯ್ಯಪ್ಪ ಹೀರೆಮಠ.ಲಕ್ಷ್ಮಣ ನಿಡೋಣಿ.ಭೀಮಪ್ಪ ಹೊಸಟ್ಟಿ. ತುಕಾರಾಮ ಸನದಿ. ಶಂಕರ ಕುಲಿಗೋಡ.ಬಸಪ್ಪ ಹಡಪದ.ಸುರೇಶ ಕತ್ತಿ. ಮಹಾವೀರ ರಾಮಧುರ್ಗ.ಶಂಕರಯ್ಯ ಹೀರೆಮಠ, ಕಮಲದಿನ್ನಿ.ಸೋಮು ಹೀರೆಮಠ. ಲಕ್ಷ್ಮಣ ಕೌಜಲಗಿ. ರಮೇಶ ಹೊಸೂರ. ಬಸಪ್ಪ ಅರಳಿಮಟ್ಟಿ.ದುಂಡಪ್ಪ ಕತ್ತಿ. ಬಾಳಗೌಡ ಪಾಟಿಲ.ಮಹಾಂತೇಶ ಲಿಗಾಡೆ.ದುಂಡಪ್ಪ ಹೊಸಟ್ಟಿ. ಸಂಗಪ್ಪ ಪಟ್ಟಣಶೆಟ್ಟಿ. ನಾರಾಯಣ ಪೂಜೇರಿ. ವಿಠ್ಠಲ ತೋಟಗಿ ಅಕ್ಬರ ಮುಜಾವರ. ಗೋಪಾಲ ಅಟಮಟ್ಟಿ. ಚರಣ ನಾಶಿ. ಬಸು ಹೊಸಮನಿ. ಕಿರಣ ಕಾಗೆ.ಸುರೇಶ ಗಂಟಿಚೋರ.ನರಸಪ್ಪ ಶೇಡಬಾಳ್ಕರ . ಯಲ್ಲಾಲಿಂಗ ಹೊಸಟ್ಟಿ ಸೇರಿದಂತೆ ಸಾವಿತ್ರಿ ಬಾಯಿ ಘುಲೆ ಮಹಿಳ ಮಂಡಳ ಸದಸ್ಯರು,ಗುರು ಹಿರಿಯರು, ಶಿಕ್ಷಕ,ಶಿಕ್ಷಕಿಯರು,ವಿದ್ಯಾರ್ಥಿಗಳಿದ್ದರು.

# ರೈತರು ಮೊಬೈಲ್ ತಂತ್ರಾಶದ ಮೂಲಕ ಬೆಳೆಗಳ ವಿವರ ದಾಖಲಿಸಿ

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ರೈತರು ಮೊಬೈಲ್ ತಂತ್ರಾಶದ ಮೂಲಕ ಬೆಳೆಗಳ ವಿವರವನ್ನು ದಾಖಲಿಸುವಂತೆ ಜಂಟಿ ಕೃಷಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್ ಅವರು ತಿಳಿಸಿದ್ದಾರೆ.

ರೈತರು ಬೆಳೆದ ಬೆಳೆಗಳ ಬಗ್ಗೆ ನಿಖರವಾಗಿ ಮಾಹಿತಿ ಪಡೆದುಕೊಳ್ಳಲು ಈಗಾಗಲೇ ಇ–ಆಡಳಿತ ವತಿಯಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ಆ್ಯಪ್ ಮೂಲಕ ಬೆಳೆ ಸಮೀಕ್ಷೆ ನಡೆಸುವ ಕಾರ್ಯ ಜಿಲ್ಲೆಯಲ್ಲಿ ಹಿಂಗಾರು ಬೆಳೆ ಸಮೀಕ್ಷೆ ಆರಂಭವಾಗಿದ್ದು, ರೈತರು ತಮ್ಮ ಹೊಲಗಳಲ್ಲಿ ಬೆಳೆದ ಬೆಳೆಗಳ ವಿವರ ದಾಖಲಿಸಲು ಆಂಡ್ರಾಯ್ಡ್ ಆ್ಯಪ್ ಮೂಲಕ ವಿವರಗಳನ್ನು ತಾವೇ ಸ್ವತಃ ಮೊಬೈಲ್ ತಂತ್ರಾಶದ ಮೂಲಕ ಹಾಗೂ ಖಾಸಗಿ ನಿವಾಸಿಗಳ (ಪಿಆರ್) ಆ್ಯಪ್ ಮೂಲಕ ದಾಖಲಿಸಬಹುದಾಗಿದೆ.

ರೈತರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇಸ್ಟೋರ್ ನಿಂದ ಬೆಳೆ ಸಮೀಕ್ಷೆ ಹಿಂಗಾರು ಹಂಗಾಮಿನ ಖಚಿಥು ಖಜಛೆಂಟಿ ಈಚಿಡಿಟಜಡಿ ಅಡಿಠಿ ಖಣಡಿತಜಥಿ 2024–25 ಆ್ಯಪ್‌ನ್ನು ಡೌನ್ಲೋಡ್ ಮಾಡಿಕೊಂಡು ಬೆಳೆ ವಿವರ ದಾಖಲಿಸಬಹುದಾಗಿದೆ.

ಬೆಳೆ ಸಮೀಕ್ಷೆ ದತ್ತಾಂಶ ಮಾಹಿತಿಯನ್ನು ಬೆಳೆ ವಿಸ್ತರಣೆ ಎಣಿಕೆ ಕಾರ್ಯದಲ್ಲಿ, ಬೆಳೆ ಕಟಾವು ಪ್ರಯೋಗದಲ್ಲಿ, ಪ್ರಕೃತಿ ವಿಕೋಪ ಸಂದರ್ಭದಲ್ಲಿ, ಬೆಳೆಹಾನಿ ವರದಿ ಸಿದ್ದಪಡಿಸಲು, ಬೆಳೆ ವಿಮಾ ಯೋಜನೆ, ಬೆಂಬಲ ಬೆಲೆ ಯೋಜನೆ, ಆರ್ ಟಿ ಸಿ ಯಲ್ಲಿ ಬೆಳೆ ವಿವರ ದಾಖಲಿಸಲು, ರಾಷ್ಟ್ರೀಯ ಹಾಗೂ ಗ್ರಾಮೀಣ ಬ್ಯಾಂಕ್ ಗಳಲ್ಲಿ ಬೆಳೆ ಸಾಲ ಮಂಜೂರು ಮಾಡಲು ಬೆಳೆ ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಲಾಗುತ್ತಿದ್ದು, ಜಿಲ್ಲೆಯಲ್ಲಿ 3,21,562 ಬೆಳೆ ತಾಕುಗಳಿದ್ದು, ಈ ತಾಕುಗಳಿಗೆ ರೈತರು ಬೆಳೆಗಳ ಮಾಹಿತಿಯನ್ನು ಸ್ವಯಂ ದಾಖಲಿಸಬೇಕು.

ರೈತರೇ ತಾವೇ ಸ್ವತಹ ಬೆಳೆ ಸಮೀಕ್ಷೆ ಆ್ಯಪ್ ಮೂಲಕ ತಾವು ಬೆಳೆದ ಮಾಹಿತಿ ನಿಖರವಾಗಿ ನೀಡಬಹುದಾಗಿದೆ. ಇದರಿಂದ ಮುಂಬರುವ ವ್ಯತ್ಯಾವನ್ನು ತಡೆಯಬಹುದಾಗಿದೆ.


ರೈತರ ಬೆಳೆ ಸಮೀಕ್ಷೆ ಕೈಗೊಳ್ಳಲು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪಿ.ಆರ್.ಗಳನ್ನು,

ಕೃಷಿ, ತೋಟಗಾರಿಕೆ ಅಥವಾ ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ನಿರಂತರವಾಗಿ ಕೆಲಸ ಮಾಡಿದಾಗ ಕಾಮಗಾರಿಗಳು ಮುಗಿಯುತ್ತವೆ: ಸಚಿವ ಎನ್.ಎಸ್. ಭೋಸರಾಜು

**ಕೊಪ್ಪಳ :** ಯಾವುದೇ ಕೆಲಸ ಮತ್ತು ಕಾಮಗಾರಿಗಳು ಕಾಲಮಿತಿಯಲ್ಲಿ ಮುಗಿಯಬೇಕಾದರೆ ನಿರಂತರವಾಗಿ ಕೆಲಸ ಮಾಡಬೇಕು ಅಂದಾಗ ಮಾತ್ರ ಅವುಗಳು ಬೇಗನೆ ಮುಗಿಯುತ್ತವೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ ಸಭಾ ನಾಯಕರಾದ ಎನ್. ಎಸ್. ಭೋಸರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ತಾಲ್ಲೂಕಿನ ನಾರಾಯಣಪೇಟೆ ಗ್ರಾಮದ ಕೊಪ್ಪಳ-ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿಯ ಜಾಕವೆಲ್ ಮತ್ತು ಪಂಪಹೌಸ್ ಪರಿವೀಕ್ಷಣೆ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿ ಮಾತನಾಡಿದರು. ಕೊಪ್ಪಳ-ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿ ಇದಾಗಿದ್ದು 6 ಕೆರೆಗಳನ್ನು 2.83 ಕೋಟಿ ವೆಚ್ಚದಲ್ಲಿ ಮಾಡಲಾಗುತ್ತಿದೆ. ಈಗಾಗಲೇ ಈ ಭಾಗದಲ್ಲಿನ ಸಮಸ್ಯೆಗಳನ್ನು ರಿವ್ಯೂವ್ ಮಾಡಲು ಎರಡು ಸಲ ಸಭೆಗಳನ್ನು ಮಾಡಲಾಗಿದೆ. ಇದರ ಜೊತೆಗೆ ಕೊಪ್ಪಳ ಜಿಲ್ಲೆಯ ಹುಲಗಿ ಗ್ರಾಮದ ಹತ್ತಿರ ಇರುವ ಹಿರೇಹಳ್ಳ ಏತ ನೀರಾವರಿ ಯೋಜನೆ ಹಾಗೂ ಕೆರೆ ತುಂಬಿಸುವ



ಕಾಮಗಾರಿಗಳು, ಭಾಣಾಪೂರ ಗ್ರಾಮದಲ್ಲಿ ಕೊಪ್ಪಳ-ಯಲಬುರ್ಗಾ ಕೆರೆ ತುಂಬಿಸುವ ಏತ ನೀರಾವರಿ ಯೋಜನೆ, ಕಡೆಕೊಪ್ಪ ಗ್ರಾಮದಲ್ಲಿ ಕುಷ್ಟಗಿ ಏತ ನೀರಾವರಿ ಯೋಜನೆ, ಈ ಎಲ್ಲಾ ಕಾಮಗಾರಿಗಳ ಪರಿವೀಕ್ಷಣೆ ನಂತರ ಶನಿವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದೇನೆ ಎಂದು ಹೇಳಿದರು.

ಕೃಷ್ಣ-ಕಾವೇರಿ ಬೇಸಿನ ಕಾಮಗಾರಿಗಳನ್ನು ಒಂದು ವರ್ಷದಲ್ಲಿ ಮುಗಿಸುವಂತೆ ಹಾಗೂ ಕೆಲಸದ ವೇಗ ಹೆಚ್ಚಿಸುವಂತೆ ಮಾಡಲಾಗುತ್ತಿದೆ. ನಮ್ಮ ಭಾಗದಲ್ಲಿಯ ಕಾಮಗಾರಿಗಳೂ ಕಾಲಮಿತಿಯಲ್ಲಿ ನಡೆಯಬೇಕು ಎಂಬ ಉದ್ದೇಶಕ್ಕಾಗಿ ವಿವಿಧ ಕಾಮಗಾರಿಗಳ ಪರಿವೀಕ್ಷಣೆಗೆ ಬಂದಿದ್ದೇನೆ. ಕಾಲಮಿತಿಯಲ್ಲಿ ಕೆಲಸ ಮಾಡದ ಗುತ್ತಿಗೆದಾರರಿಗೆ ಪೆನಾಲ್ಟಿ ಹಾಕಲಾಗುತ್ತದೆ. ಗುತ್ತಿಗೆದಾರರು ಕೆಲಸವನ್ನು ಕಾಲಮಿತಿಯಲ್ಲಿ ಮುಗಿಸಿದಾಗ ಯಾವುದೇ ಸಮಸ್ಯೆಗಳಾಗುವುದಿಲ್ಲ ವಿಳಂಬವಾದರೆ ಇನ್ನೂ ಬೇರೆ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು.

ಕೊಪ್ಪಳ-ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿಯ ಜಾಕವೆಲ್ ಮತ್ತು ಪಂಪಹೌಸ್ ಪರಿವೀಕ್ಷಣೆ ಸಂದರ್ಭದಲ್ಲಿ ಸಚಿವರು ಯಾವ ತಿಂಗಳಲ್ಲಿ ಎಷ್ಟು ಕೆಲಸ ಮುಗಿಸಬೇಕು ಎಂದು ಮುಂಚಿತವಾಗಿ ತಮಲ್ಲಿ ಒಂದು ಯೋಜನೆ ಇರಬೇಕು. 18 ತಿಂಗಳಲ್ಲಿ ಮುಗಿಸುವ ಕೆಲಸವನ್ನು 6 ವರ್ಷ ಮಾಡಿದರೆ ಹೇಗೆ ಇದನ್ನು ಆದಷ್ಟು ಬೇಗನೆ ಮುಗಿಸಿ ವರದಿ ನೀಡುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ, ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ರಾಘವನ್, ಮುಖ್ಯ ಇಂಜಿನಿಯರ್ ಜಗದೀಶ್ ರಾಥೋಡ್, ಅಧೀಕ್ಷಕ ಇಂಜಿನಿಯರ್ ಲಿಂಗರಾಜ್, ಇಇ ಬಿ.ಎಸ್.ಪಾಟೀಲ್, ಇಇ ಶ್ರವಣಕುಮಾರ, ಎಇಇ.ಗಳಾದ ಜೆ.ಎನ್. ಜೋಳಗೊಂಡ, ದೇವೇಂದ್ರಪ್ಪ ಹಾಗೂ ರಶ್ಮೀ, ಜೂನಿಯರ್ ಇಂಜಿನಿಯರ್ ಪ್ರಕಾಶ ಪಾಟೀಲ್ ಸೇರಿದಂತೆ ಇತರೆ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಶಿಕ್ಷಕಿ ಸುಜಾತಾ ಮುದಗಲ್ ಸೇರಿ ಹಲವರಿಗೆ ಜಿಲ್ಲಾ ಪ್ರಶಸ್ತಿ ಪ್ರಧಾನ



**ಕೊಪ್ಪಳ :** ನಗರದ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕಿಯಾದ ಶ್ರೀಮತಿ ಸುಜಾತಾ ಮುದಗಲ್ ರವರಿಗೆ ಅವರ ಶೈಕ್ಷಣಿಕ ಉತ್ತಮ ಸೇವೆ ಪರಿಗಣಿಸಿ ಜಿಲ್ಲಾಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿ ಸತ್ಕರಿಸಲಾಯಿತು,

ನಗರದ ಸಾಹಿತ್ಯ ಭವನದಲ್ಲಿ ವಿವಿಧ ಸಂಘಟನೆಗಳಿಂದ ಜರುಗಿದ ಸಮಾರಂಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಶಾಲೆಯ ಸಹ ಶಿಕ್ಷಕರುಗಳಿಗೆ 2024- 25 ನೇ ಸಾಲಿನ ಸಾವಿತ್ರಿಬಾಯಿ ಫುಲೆ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕಿ ಸುಜಾತಾ ಮುದಗಲ್ ಸೇರಿದಂತೆ ಇರಕಲ್ ಗಡ ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕ ರಾಮಣ್ಣ ಬಾರಕೇರ , ಮೈನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಬಸಯ್ಯ ಹಿರೇಮಠ್, ಅಳವಂಡಿಯ ಜಿಜಿ ಹೆಚ್‌ಎಸ್ ಶಾಲೆಯ ಸಹ ಶಿಕ್ಷಕಿ ಶ್ರೀದೇವಿ ಬಂಡಿಹಾಳ, ಭೂಚನಹಳ್ಳಿ ಶಾಲೆಯ ಶಿಕ್ಷಕಿ ಸುಮಂಗಲ ಪಾಟೀಲ್, ಬೆಟಗೇರಿ ಶಾಲೆಯ ಮರ್ದಾನ ಅಲಿ ಗಡಾದ, ಅಗಳ ಕೇರಾ ಶಾಲೆಯ ಶಿಲ್ಪಾ ಅಮಲಿ ಕೊಪ್ಪ, ಚಿಲಕಮುಕ್ಕಿ ಶಾಲೆಯ ದೇವಮ್ಮ ಕೊಪ್ಪಳ ನಗರ ಜಿಜಿ ಎಚ್‌ಎಸ್ ಶಾಲೆಯ ಎಂ ವಿಜಯಲಕ್ಷ್ಮೀ ರವರುಗಳಿಗೆ ಇದೆ ವೇಳೆ ಸಾವಿತ್ರಿಬಾಯಿ ಫುಲೆ ಜಿಲ್ಲಾಮಟ್ಟದ ಪ್ರಶಸ್ತಿಯನ್ನು ಪ್ರಧಾನ ಮಾಡಿ ಸನ್ಮಾನಿಸಿ ಸತ್ಕರಿಸಲಾಯಿತು,

ಸುಜಾತಾ ಮುದಗಲ್ ಸೇರಿದಂತೆ ಹಲವು ಶಿಕ್ಷಕರುಗಳಿಗೆ ಪ್ರಶಸ್ತಿ ಲಭಿಸಿರುವುದಕ್ಕೆ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಉಪರಾಚಾರ್ಯರಾದ ಎಂಎ ಖಯ್ಯುಮ್ ಮತ್ತು ನಿವೃತ್ತ ವೃತ್ತಿ ಶಿಕ್ಷಕ ಹಾಗೂ ಪ್ರಶಸ್ತಿ ಪುರಸ್ಕೃತರಾದ ಅಮೀರ್ ಹಮ್ಜಾ ನದಾಫ್ ಸೇರಿದಂತೆ ಇತರ ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿ ಬಳಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಕೊಪ್ಪಳ: ಜೀವ ವಿಮಾ ಪಾಲಸಿ ಪರಿಹಾರ ಪಾವತಿಸಲು ಇನ್ಸೂರೆನ್ಸ್ ಕಂಪನಿಗೆ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ಆದೇಶ

**ಕೊಪ್ಪಳ :** ಫಿರ್ಯಾದುದಾರರಿಗೆ ಜೀವ ವಿಮಾ ಪಾಲಸಿ ಪರಿಹಾರ ಪಾವತಿಸಲು ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಇನ್ಸೂರೆನ್ಸ್ ಕಂಪನಿಗೆ ಆದೇಶ ನೀಡಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 34/2024 ರಲ್ಲಿ 2024ರ ಡಿಸೆಂಬರ್ 30 ರಂದು ನೀಡಿದ ಅಂತಿಮ ತೀರ್ಪಿನ ಸಾರಾಂಶದ ಅನ್ವಯ ಫಿರ್ಯಾದುದಾರರಾದ ಸುನಿತಾ ಗಂಡ ದಿ: ಪಂಪಾಪತಿಸಾ:ಬಸಾಪಟ್ಟಣ,ತಾ:ಗಂಗಾವತಿ ಇವರ ಗಂಡನಾದ ದಿ.ಪಂಪಾಪತಿ ಹರಿಜನ ಇವರು ತಮ್ಮ ಜೀವಿತ ಕಾಲದಲ್ಲಿ 2023ರ ಜೂನ್ 14 ರಂದು ಎದುರುದಾರರಾದ ಹೆಚ್.ಡಿ.ಎಫ್.ಸಿ ಸ್ಟ್ಯಾಂಡರ್ಡ್ ಲೈಫ್ ಇನ್ಸೂರೆನ್ಸ್ ಕಂಪನಿ ಲಿಂ. ಮುಂಬೈ (HDFC Standad Life Insurance Company Ltd., Mumbai) ಇವರಲ್ಲಿ ಅರ್ಧ ವಾರ್ಷಿಕ ಪ್ರಿಮಿಯಂ ರೂ. 50,000 ನ್ನು ಪಾವತಿಸಿ ಜೀವ ವಿಮಾ ಪಾಲಸಿಯನ್ನು ಪಡೆದುಕೊಂಡಿದ್ದರು. ಆದರೆ ಪಾಲಸಿದಾರರಾದ ಪಂಪಾಪತಿ ಇವರು 2023ರ ಸೆಪ್ಟೆಂಬರ್ 11 ರಂದು ಹೃದಯಘಾತದಿಂದ ನಿಧನ ಹೊಂದಿರುತ್ತಾರೆ. ನಾಮಿನಿಯಾದ ಪಾಲಸಿದಾರರ ಪತ್ನಿ ಸುನಿತಾ ಎದುರುದಾರ ಜೀವ ವಿಮಾ ಕಂಪನಿಯಲ್ಲಿ ಜೀವ ವಿಮಾ ಪಾಲಸಿಯನ್ನು ಪಡೆದ ವಿಷಯ ತಿಳಿದು ಕ್ಲೇಮ್ ಫಾರ್ಂ ಭರ್ತಿ ಮಾಡಿ, ಎಲ್ಲಾ ದಾಖಲಾತಿಗಳನ್ನು ಎದುರುದಾರರ ಕಂಪನಿಗೆನೀಡಿವಿಮಾಪರಿಹಾರಮೊತ್ತವನ್ನು ಪಾವತಿಸುವಂತೆ ವಿನಂತಿಸಿಕೊಂಡಿರುತ್ತಾರೆ. ಎದುರುದಾರ ವಿಮಾ ಕಂಪನಿಯವರು ಈ ಕ್ಲೇಮ್‌ನ್ನು ಸ್ವೀಕರಿಸಿ ದೂರುದಾರರ ಪಾಲಸಿಯನ್ನು ಪಡೆಯುವ ಸಂದರ್ಭದಲ್ಲಿ ಉದ್ಯೋಗ ಮತ್ತು ಆದಾಯವನ್ನು ತಪ್ಪಾಗಿ ನಮೂದಿಸಿರುತ್ತಾರೆ ಎನ್ನುವ ಕಾರಣಕ್ಕೆ ಪಾಲಸಿಯ ಕ್ಲೇಮ್‌ನ್ನು ತಿರಸ್ಕಾರ ಮಾಡಿರುತ್ತಾರೆ. ದೂರುದಾರರಿಗೆ ಎದುರುದಾರರು ವಿಮಾ ಪಾಲಸಿಯ ಪರಿಹಾರದ ಮೊತ್ತವನ್ನು ನೀಡದೇ ನಿರ್ಲಕ್ಷ ತೋರಿ ಸೇವಾ ನ್ಯೂನತೆ ಎಸಗಿದ್ದರಿಂದ ದೂರುದಾರರು ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಅಯೋಗಕ್ಕೆ ವಿಮಾ ಕಂಪನಿ ವಿರುದ್ಧ ಪರಿಹಾರವನ್ನು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

ಕೊಪ್ಪಳಜಿಲ್ಲಾಗ್ರಾಹಕರವ್ಯಾಜ್ಯಗಳಪರಿಹಾರ ಆಯೋಗವು ದೂರನ್ನು ದಾಖಲಿಸಿಕೊಂಡ ನಂತರ ಜಿಲ್ಲಾ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ವಾದ ಪ್ರತಿವಾದಗಳನ್ನು ಆಲಿಸಿ, ಎದುರುದಾರರಿಂದ ಉಂಟಾದ ಸೇವಾ ನ್ಯೂನತೆಗಾಗಿದೂರುದಾರರಿಗೆಜೀವವಿಮಾ ಪಾಲಸಿ ಒಟ್ಟು ಮೊತ್ತ ರೂ 20,16,589 ಪರಿಹಾರಗಳಿಗೆ ವಾರ್ಷಿಕ ಶೇ.6ರ ಬಡ್ಡಿ ಸಮೇತ ದೂರಿನ ದಿನಾಂಕದಿಂದ ಪಾವತಿಯಾಗುವವರೆಗೆ ದೂರುದಾರರಿಗೆ ಪಾವತಿಸುವಂತೆ ಆದೇಶಿಸಿರುತ್ತಾರೆ. ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ ರೂ. 5,000 ಗಳನ್ನು ಹಾಗೂ ದೂರಿನ ಖರ್ಚು ರೂ. 5000 ಗಳನ್ನು 45 ದಿನಗಳ ಒಳಗಾಗಿ ಎದುರುದಾರು ದೂರುದಾರರಿಗೆ ಪಾವತಿಸುವಂತೆ ಆದೇಶವನ್ನು ನೀಡಿರುತ್ತದೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿ ಪಿ.ಎಸ್ ಅಮರದೀಪ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

30 ದಿನಗಳ ಮೊಬೈಲ್ ದುರಸ್ತಿ ಮತ್ತು ಸರ್ವೀಸಿಂಗ್ ಹಾಗೂ ಮೋಟಾರ್ ರೀವೈಂಡಿಗ್ ಮತ್ತು ಪಂಪಸೆಟ್ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಜಿದಾರರು 18 ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಪಾಸ್ ಆಗಿರಬೇಕು. ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲಿಚ್ಛೀಸುವ ಆಸಕ್ತರು ತಮ್ಮ ಆಧಾರ ಕಾರ್ಡ ಜೆರಾಕ್ಸ್ ಪ್ರತಿ, ರೇಶನ್ ಕಾರ್ಡ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಸೈಜ್ ಮೂರು ಫೋಟೋ, ಮಾರ್ಕ್ಸ್‌ಕಾರ್ಡ ಜೆರಾಕ್ಸ್ ಪ್ರತಿಯೊಂದಿಗೆ ಅರ್ಜಿಯನ್ನು ನಿರ್ದೇಶಕರು, ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ದೂ.ಸಂ: 08539-231038, ಮೊ.ಸಂ: 9483618178, 9481085217, 7259073827, 9538096796 ಗೆ ಸಂಪರ್ಕಿಸಬಹುದಾಗಿದೆ.

ಸ್ವಯಂ ಉದ್ಯೋಗ ತರಬೇತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡಲಾಗುವುದು. ತರಬೇತಿಗಾಗಿ ಜನವರಿ 11 ರಂದು ಸಂದರ್ಶನ ನಡೆಯಲಿದ್ದು, ಜ. 13 ರಿಂದ ತರಬೇತಿ ಪ್ರಾರಂಭವಾಗಲಿವೆ ಎಂದು ಕೊಪ್ಪಳ ಎಸ್‌ಬಿಐ ಆರ್‌ಸಿಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಟಗರು ಸಾಕಾಣಿಕೆ ಮಾಡುವುದನ್ನು ಯುವಕರು ಉಪಕಸಬನ್ನಾಗಿ ರೂಡಿಸಿಕೊಳ್ಳಿ: ಗಂಗಾಧರ ಸ್ವಾಮಿಜಿ



**ಕಲಾದಗಿ:** ಟಗರುಸಾಕಾಣಿಕೆರೈತರ ಉಪ ಕಸಬುವಾಗಿದ್ದು ರೈತ-ರಿಗೆ ಮತ್ತು ನವ ರೈತಯುವಕ-ರಿಗೆ ಟಗರು ಸಾಕಾಣಿಕೆ ಮಾಡುವ ಕಾರ್ಯವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿದ್ದಾಜಿದ್ದಿನ ಟಗ-ರಿನ ಕಾಳಗ ಹಮ್ಮಿಕೊಂಡಿದ್ದು ಅಭಿನಂದನೀಯವಾಗಿದೆ ಎಂದು ಗುರುಲಿಂಗೇಶ್ವರ ಮಠದ ಶ್ರೀ. ಷ.ಬ್ರ.ಗಂಗಾಧರ ಸ್ವಾಮೀಜಿ ಹೇಳಿದರು.

ಹೊಸ ವರ್ಷದ ಪ್ರಯುಕ್ತ ಇಲ್ಲಿಯ ಡೈಮಂಡ ಕಿಂಗ್ ಗೆಳೆಯರ ಬಳಗದವರು ಹಮ್ಮಿಕೊಂಡಿದ್ದ ಜಿದ್ದಾ ಜಿದ್ದಿನ ಓಪನ ಟಗ-ರಿನ ಕಾಳಗದ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಅವರು ಹಬ್ಬ ಹರಿದಿನಗಳಲ್ಲಿ ಇಂತಹ ಕ್ರೀಡೆ ಮತ್ತು ಮನೋರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ಹಬ್ಬಕ್ಕೆ ವಿಶೇಷ ಮೆರಗು ಬರುತ್ತದೆ. ಹೊಸ ವರ್ಷವನ್ನು ವಿಭಿನ್ನವಾಗಿ ಆಚರಿಸುವ ಸಲುವಾಗಿ ಟಗ-ರಿನ ಕಾಳಗ ಹಮ್ಮಿಕೊಂಡು ವಿಜೇತ ಟಗರುಗಳಿಗೆ ಎಚ್.ಎಫ್ ಮೋಟಾರ ಸೈಕಲ್, ಖಿಲಾರಿ ಹೋರಿ,

ಫ್ರೀಜ್, ಟಿವ್ಹಿ ಅಂತಹ ಸಾಮಗ್ರಿ ಬಹುಮಾನಗಳನ್ನು ಕೊಡಮಾಡುತ್ತಿರುವುದು ನೀಜ-ಕ್ಕೂ ಸಂತಸದ ಸಂಗತಿಯಾಗಿದೆ. ಟಗರುಸಾಕಾಣಿಕೆಮಾಡುವುದನ್ನು ಯುವಕರು ಉಪಕಸಬನ್ನಾಗಿ ರೂಡಿಸಿಕೊಂಡರೇ ಆರ್ಥಿಕವಾಗಿ ಬಲಿಷ್ಠರಾಗಲು ಸಹಕಾರಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕನ್ನಡ ಜಾನಪದ ಪರಿಷತ್ತ್ ಗ್ರಾಮ ಘಟಕದ ಅಧ್ಯಕ್ಷ ರಜಾಕ ಗೌಂಡಿ, ಲಕ್ಕಮ್ಮದೇವಿ ಮಹಾರಜರು, ಖಜ್ಜಿಡೋಣಿ ಗ್ರಾ.ಪಂ.ಮಾಜಿ ಅಧ್ಯಕ್ಷ ಪ್ರವೀಣ ಅರಕೇರಿ, ಕಲೆ ಮತ್ತು ಸಾಂಸ್ಕೃತಿಕ ರಕ್ಷಣಾ ವೇಧಿಕೆ ಅಧ್ಯಕ್ಷ ಮಲ್ಲಪ್ಪ ಜಮಖಂಡಿ, ಬಸವರಾಜ ಬಿಲಕೇರಿ, ನಾಗಪ್ಪ ಗಾಣಿಗೇರ, ಮಲೀಕ ಮಕಾನದಾರ, ಗ್ರಾ.ಪಂ.ಸದಸ್ಯ ರಮೇಶ ಗಾಣಿಗೇರ, ಹನಮಂತ ಗದ್ದನಕೇರಿ, ಅಮೀನಸಾಬ ನದಾಫ, ಬಾಲು ತಳವಾರ, ಭೀಮಶಿ ಕರಡಿಗುಡ್ಡ, ಸುಭಾಸ ನಾಯ್ಕರ ಇದ್ದರು.

# ಸಿದ್ದೇಶ್ವರ ಶ್ರೀಗಳ ಆಶಯದಂತೆ ನಡೆಯಬೇಕು: ಡಿ.ಆರ್. ಪಾಟೀಲ

**ವಿಜಯಪುರ :** ದೇಶದಲ್ಲಿ ಸೇವೆ, ಪ್ರೀತಿ, ಆತ್ಮೀಯತೆ ಬೆಳೆಯಬೇಕು. ಆ ನಿಟ್ಟಿನಲ್ಲಿ ನಾವು ಸಿದ್ದೇಶ್ವರ ಅಪ್ಪಾವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದು ಮಾಜಿ ಶಾಸಕ ಹಾಗೂ ಲೋಕ ಶಿಕ್ಷಣ ಟ್ರಸ್ಟ್‌ನ ಧರ್ಮದರ್ಶಿ ಡಿ.ಆರ್.ಪಾಟೀಲ ಹೇಳಿದರು.

ನಗರದ ಜ್ಞಾನಯೋಗಾಶ್ರಮದಲ್ಲಿ ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿಗಳವರ ಗುರುನಮನ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶ್ರಿ ಸಿದ್ದೇಶ್ವರ ಅಪ್ಪನವರು ನಮ್ಮ ಹೃದಯದಲ್ಲಿ ವಾಸವಾಗಿದ್ದಾರೆ. ಅಪ್ಪಾವರು ಹಳ್ಳಿಗಳನ್ನು ಸ್ವಚ್ಛವಾಗಿಡುವುದರ ಬಗ್ಗೆ ಒತ್ತಿ ಹೇಳುತ್ತಿದ್ದರು. ನಾವು ಹಳ್ಳಿಯ ಸೊಬಗನ್ನು ಕಾಪಾಡಿಕೊಳ್ಳಲು ಸ್ವಚ್ಛವಾಗಿಸುವ ಕೆಲಸ ಮಾಡಬೇಕು. ಪೂಜ್ಯರು ತಮ್ಮ ನಡೆನುಡಿಗಳಿಂದ ನಮ್ಮ ಮೇಲೆ ಪ್ರಭಾವ ಬೀರಿ ಇಂದಿಗೂ ನಮ್ಮೊಂದಿಗೆ ಇದ್ದಾರೆ. ಅವರಿಂದಾಗಿ ನನ್ನೊಳಗೆ ಬಹಳಷ್ಟು ಬದಲಾವಣೆಯಾಗಿದೆ ಎಂದು ಹೇಳಿದರು.

ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಶ್ರೀ ಸಿದ್ದೇಶ್ವರ ಅಪ್ಪಗಳು ಈ ನಾಡಿಗೆ ಸರಳತೆಯನ್ನು ರೂಢಿಸಿದ್ದಾರೆ. ಅವರ ಪ್ರವಚನಗಳಲ್ಲಿ ನಮಗೆ ಸಾಕಷ್ಟು ಜ್ಞಾನವನ್ನು ಹಂಚಿದ್ದಾರೆ. ಅಪ್ಪಾವರ ಆಶೀರ್ವಾದಿಂದ ನನಗೆ ಬಹಳಷ್ಟು ಒಳ್ಳೆಯದು ಆಗಿದೆ. ಅಪ್ಪಗಳು ಸದಾ ನನ್ನ ಮನಸ್ಸಿನಲ್ಲಿ ವಾಸವಾಗಿದ್ದಾರೆ. ನಾವು ಅವರ ಹೇಳಿಕೊಟ್ಟು ಮಾರ್ಗದಲ್ಲಿ ಬದುಕುಬೇಕು ಎಂದರು.

ಸುತ್ತೂರು ಮಠದ ಜಯರಾಜೇಂದ್ರ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿ, ಶ್ರೀ ಸಿದ್ದೇಶ್ವರ ಶ್ರೀಗಳು ಜೀವಿಸಿದ ಅವಧಿಯಲ್ಲಿ ನಾವು ಬದುಕಿರುವುದು ನಮ್ಮ ಪುಣ್ಯ. ಭಾರತದಲ್ಲಿ ಸಾಕಷ್ಟು ಸಂತರು ಮಾಂತರು ಜೀವಿಸಿ ಹೋಗಿದ್ದಾರೆ. ಅವರಲ್ಲಿ ಅತ್ಯಂತ ಶ್ರೇಷ್ಠರಾದವರು ಪರಮಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಎಂದರು. ಪೂಜ್ಯರು ನುಡಿದಂತೆ ನಡೆದರು, ನಡೆದಂತೆ ನುಡಿದರು ಮಾತೃಹೃದಯಿಯಾಗಿ ಸರ್ವರನ್ನು ಸಮಾನವಾಗಿ ಕಂಡರು. ಲೌಕಿಕವಾಗಿ ಯಾವುದೇ ವಸ್ತುವಿನ ಮೇಲೆ ವ್ಯಾಮೋಹ ಇರಲಿಲ್ಲ. ಒಬ್ಬ ಸನ್ಯಾಸಿ ಹೇಗಿರಬೇಕು ಎನ್ನುವುದನ್ನು ನಮ್ಮಗಳಿಗೆ ತೋರಿಸಿಕೊಟ್ಟು ಹೋಗಿದ್ದಾರೆ. ಅವರ ದಾರಿಯಲ್ಲಿಯೇ ನಾವು ನಡೆಯಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಾಡಿನ ಸ್ವಾಮೀಜಿಗಳು, ಮಠಾಧೀಶರು, ಹಾಗೂ ಭಕ್ತರು ಭಾಗವಹಿಸಿದ್ದರು.

# ಗುಳೇದಗುಡ್ಡ: ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿ

**ಗುಳೇದಗುಡ್ಡ :** ಪಟ್ಟಣದ ಶ್ರೀ ಸರಸ್ವತಿ ವಿದ್ಯಾ ಸಂಸ್ಥೆ ಮಡಿವಾಳಪ್ಪ ಹುಚ್ಚಪ್ಪ ಆಡಿನ ಕನ್ನಡ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳ 2ನೇ ವರ್ಷದ ಪುಣ್ಯಸ್ಮರಣೆ ಹಾಗೂ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ಅವರ ಜನ್ಮದಿನ ಕಾರ್ಯಕ್ರಮ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಸಹ ಕಾರ್ಯದರ್ಶಿ ರವಿ ಶೇಬಿನಕಟ್ಟಿ ಸಾವಿತ್ರಿಬಾಯಿ ಫುಲೆ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ದೇಶದ ಭದ್ರತೆಗೆ ಆಸ್ತಿ ಆಗುವ ಮಕ್ಕಳನ್ನು ಆದರ್ಶ ಪ್ರಜೆಗಳನ್ನಾಗಿ ಸಿದ್ಧಪಡಿಸುವ ಶಿಕ್ಷಕರು ಈ ದೇಶದ ಶಿಲ್ಪಿಗಳು. ಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ಬಹಳಷ್ಟು ಅವಶ್ಯವಾಗಿದ್ದು, ಮಕ್ಕಳಿಗೆ ಶಿಕ್ಷಕರು ಗುಣಾತ್ಮಕ ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ಕಲಿಸಬೇಕು. ಮಕ್ಕಳಿಗೆ ಆಸ್ತಿ ಮಾಡುವ ಬದಲಿಗೆ ಮಕ್ಕಳನ್ನೆ ದೇಶಕ್ಕೆ ಆಸ್ತಿಯನ್ನಾಗಿ ಮಾಡಬೇಕು. ಮಕ್ಕಳ ಮೂಲಕ ದೇಶದ ಉಜ್ವಲ ಭವಿಷ್ಯ ಅಡಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ತಾಂಡೂರ, ಖಜಾಂಚಿ ಪರುಶರಾಮ ಪವಾರ ಸಂಸ್ಥೆ ಸದಸ್ಯರಾದ ಸಂಗಣ್ಣ ಹುನಗುಂದ, ಪ್ರಾಥಮಿಕ ಶಾಲೆಯ ಮುಖ್ಯ ಗುರು ಪಿ.ಆರ್.ಬಂತಲ್, ಶಾಲೆಯ ಮುಖ್ಯ ಗುರು ನಾಗರಾಜ ದೊಡಮನಿ ಇತರರು ಇದ್ದರು.

ವಿವೇಕಾನಂದ ದೇವಾಂಗಮಠ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳಿಂದ ಶ್ರೀ ಸಿದ್ದೇಶ್ವರ ಸ್ವಾಮಿಜಿಗಳಿಗೆ ನಮನಾಂಜಲಿ ಸಲ್ಲಿಸಿದರು. ಎಮ್.ಎಸ್. ಹಿರೇಮಠ ಪ್ರಾಸ್ತಾವಿಕ ನುಡಿಗಳು ಹೇಳಿದರು. ಕೆ.ಎಸ್. ರಂಜಣಗಿ ವಂದಿಸಿದರು.



# ಪರಮಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ದ್ವಿತೀಯ ವರ್ಷದ ಪುಣ್ಯ ಸ್ಮರಣೆ



**ವರದಿ. ಚಂದ್ರೇಗೌಡ.**

**ಲಿಂಗಸಗೂರು :** ಸ್ಥಳೀಯ ಅಪ್ಪಾಜಿ ಖಾನವಳಿ ಹತ್ತಿರದ ಆವರಣದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ದ್ವಿತೀಯ ವರ್ಷದಪುಣ್ಯ ಸ್ಮರಣೆ ಐಜಣ' ಮಾಡಲಾಯಿತು. ಈಸಂಧರ್ಭದಲ್ಲಿನೂತನವಾಗಿ. 2025ನೇ ಸಾಲಿನ ಕ್ಯಾಲೆಂಡರನ್ನು ಪರಮಪೂಜ್ಯ ಶ್ರೀ ಸಿದ್ದೇಶ್ವರ ಮಹಾ ಸ್ವಾಮಿಗಳುಹಾಗೂ ಭಕ್ತಾದಿಗಳು ಸೇರಿ ಬಿಡುಗಡೆಮಾಡಲಾಯಿತು.

ಈ.ಸಂಧರ್ಭದಲ್ಲಿ.ಪರಮಪೂಜ್ಯಸ್ವಾಮಿಗಳು. ಹಾಗೂಊರಿನ ಮುಖಂಡರು ಗಣ್ಯರು ಭಕ್ತಾದಿಗಳು ಇತರರಿದ್ದರು.

# ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ಜನ್ಮದಿನಾಚರಣೆ

## ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದ್ದು ಸಾವಿತ್ರಿ ಬಾಯಿ ಪುಲೆ: ಸುಮೇದಾ ಮಾನೆ

**ಬಾಗಲಕೋಟೆ :** ಅನಿಷ್ಟ ಪದ್ದತಿಗಳ ವಿರುದ್ದ ಹೋರಾಡಿ ಹೆಚ್ಚು ಮಕ್ಕಳ ಶಿಕ್ಷಣಕ್ಕೆ ಭದ್ರ ಬೂನಾದಿ ಹಾಕಿದ್ದು ಸಾವಿತ್ರಿ ಬಾಯಿ ಪುಲೆ ಎಂದು ಬಿಜೆಪಿ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಸಮೇದಾ ಮಾನೆ ಹೇಳಿದರು.

ಅವರು ನಗರದ ಶಿವಾನಂದ ಜೀನನದಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾಟೀ ಮಹಿಳಾ ಮೋರ್ಚಾದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಜೆ ಅವರ ಜನ್ಮದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು. ಅವರು ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು



ನಿರಾಕರಿಸದ್ದ ಸಮಾಜಕ್ಕೆ ಎದುರಾಗಿ ನೋವು ಅಪಮಾನಗಳನ್ನು ಮೆಟ್ಟಿ ನಿಂತು ಎಲ್ಲಾ ವರ್ಗಗಳ ಹೆಣ್ಣುಮಕ್ಕಳಿಗೆ ಶಾಲೆ ಪ್ರಾರಂಭಿಸಿ ಅಕ್ಷರ ಕಲಿಸಿದ ದಿಟ್ಟ ಮಹಿಳೆ ದೇಶದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ಇಂದು ಮಹಿಳಾ ವರ್ಗಕ್ಕೆ ಮಾದರಿಯಾಗಿದ್ದಾಳೆ ಎಂದರು.

ಮಹಿಳಾ ಮೋರ್ಚಾ ಜಿಲ್ಲಾ ಉಪಾಧ್ಯಕ್ಷೆ ಭಾಗೀರತಿ ಪಾಟೀಲ ಮಾತನಾಡಿದರು, ಶಶಿಕಲಾ ಮಜ್ಜಗಿ ಕಾರ್ಯಕ್ರಮವನ್ನು ನೀರೂಪಿಸಿದರು,

ಡಾ.ವಿಜಯಲಕ್ಷ್ಮೀ ತುಂಗಳ, ಭಾಗ್ಯಾ ಹುದ್ನೂರ, ವೈಷ್ಣವಿ, ಬಾಗೇವಾಡಿ, ಸುಜಾತಾ ಶಿಂದೆ, ಭಾಗಿರತಿ ಪಾಟೀಲ,ನಗರಸಭೆ ಅಧ್ಯಕ್ಷೆ ಸವಿತಾ ಲಂಕೇನ್ನವರ, ಕಾವೇರಿ ರಾಥೋಡ. ಗೀತಾ ಸೂರ್ಯವಂಶಿ, ಶಶಿಕಲಾ ಮಜ್ಜಗಿ, ಪಾರ್ವತಿ ಹುಗ್ಗಿ, ಸಾವಿತ್ರಿ ಜೋಗುರ, ಶಿವಲೀಲಾ ಪಟ್ಟಣಶೆಟ್ಟಿ, ಹಾಗೂ ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ. ಡಾ.ಎಂ.ಎಸ್.ದಡ್ಡೆನ್ನವರ,ರಾಜು ನಾಯ್ಕರ, ಸತ್ಯನಾರಾಯಣ ಹೆಮಾದ್ರಿ, ಸುರೇಶ ಕೋಣ್ಣೂರ, ಗುಂಡುರಾವ ಶಿಂದೆ ಬಸವರಾಜ ಹುನಗುಂದ.ಉಮೇಶ ಹಂಚಿನಾಳ ಭಾಗವಹಿಸಿದ್ದರು.

# ಜೀವನದಲ್ಲಿ ತಾಯಿ-ಗುರು ಋಣ ತೀರಿಸಲು ಸಾಧ್ಯವಿಲ್ಲ: ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ



**ವಿಜಯಪುರ :** ಜೀವನದಲ್ಲಿ ನಾವು ಎಲ್ಲರ ಋಣ ತೀರಿಸಬಹುದು. ಆದರೆ ಗುರು ಹಾಗೂ ತಾಯಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ ಎನ್ನುವುದನ್ನೇ ಶ್ರೀ ಸಿದ್ಧೇಶ್ವರ ಅಪ್ಪಗಳು ತಮ್ಮ ಜ್ಞಾನ ದಿವಿಟಿಗೆಯನ್ನು ಹಿಡಿದು ನಾಡಿನಾದ್ಯಂತ ತಿರುಗಾಡಿ ನಡೆನುಡಿ ಆಚಾರಗಳಿಂದ ನಮ್ಮಲ್ಲಿ ಬದಲಾವಣೆ ತಂದಿರುವ ಅಪರೂಪದ ಸಂತ ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ ಹೇಳಿದರು.

ನಗರದ ಜ್ಞಾನಯೋಗಾಶ್ರಮದಲ್ಲಿ ನಡೆಯುತ್ತಿರುವ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗುರುನಮನ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತನ್ನಲ್ಲಿರುವ ಜ್ಞಾನವನ್ನು ಧಾರೆ ಎರೆದು ತಾನು ಮಾಡುವ ಕೆಲಸವನ್ನು ಶಿಷ್ಯನಿಂದ ಮಾಡಿಸುವಾತ ಗುರು. ತಾಯಿ ನಮಗೆ ಜನ್ಮ ನೀಡಿದ್ದಾಳೆ. ಅವಳು ಜನ್ಮಕೊಟ್ಟ ಮಗನಿಗೆ ಗುರುವಾಗಿ ನಿಲ್ಲುತ್ತಾಳೆ. ಆದರೆ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಕೇವಲ ಗುರುವಿನ ಸ್ಥಾನವನ್ನು ತುಂಬಿಲ್ಲ. ಅವರು ತಾಯಿ ಹಾಗೂ ಗುರುವಿನ ಸ್ಥಾನ ಎರಡನ್ನೂ ತುಂಬಿದ್ದಾರೆ. ಕೋಲ್ಕತ್ತಾ ಸ್ವಾಮಿ ವಿವೇಕಾನಂದರ ಕರ್ಮ ಭೂಮಿ. ಹಾಗೇ ವಿಜಯಪುರ ಶ್ರೀ ಸಿದ್ಧೇಶ್ವರ ಶ್ರೀಗಳ ಕರ್ಮ ಭೂಮಿಯಾಗಿದೆ. ಈ ಭರತ ಭೂಮಿಯಲ್ಲಿ ಶ್ರೀ ಸಿದ್ಧೇಶ್ವರ ಶ್ರೀಗಳ ರೂಪದಲ್ಲಿ ಸ್ವಾಮಿ ವಿವೇಕಾನಂದರನ್ನು ನಾವು ಮತ್ತೇ ಕಂಡಿದ್ದೇವೆ ಎಂದರು.

ಸನಾತನ ಧರ್ಮ, ನಾಡಿನ ಸಂಸ್ಕೃತಿ ಹಾಗೂ ವಚನ ಸಾಹಿತ್ಯದ ರಾಯಬಾರಿಯಾಗಿ ನಾವು ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳನ್ನು ನೋಡಿದ್ದೇವೆ. ಯಾವುದೇ ಬದಲಾವಣೆ ಪ್ರಾರಂಭವಾಗಬೇಕಾದರೆ ಅದು ನನ್ನಿಂದಲೇ ಆಗಲಿ ಎಂದು ಸರ್ವ ಸಂತರಿಗೂ ಮಾದರಿಯಾಗಿ ನಿಂತವರು ಪೂಜ್ಯರು. ಯಾವುದನ್ನು ಸಮಾಜ ಒಪ್ಪಲ್ಲವೋ, ಅದನ್ನು ಆ ಭಗವಂತ ಕೂಡ ಒಪ್ಪಲು ಸಾಧ್ಯವಿಲ್ಲ. ಅದನ್ನೇ ಪೂಜ್ಯ ಶ್ರೀ ಸಿದ್ಧೇಶ್ವರ ಅಪ್ಪಗಳು ನಮಗೆಲ್ಲ ತಿಳಿಸಿದ್ದಾರೆ ಎಂದು ಹೇಳಿದರು.

ಶರಣರಿಗೆ ಮರಣವೇ ಮಹಾನವಮಿ. ಶ್ರೀ ಸಿದ್ಧೇಶ್ವರ ಶ್ರೀಗಳು ಎಲ್ಲರ ಬದುಕಿನಲ್ಲಿ ಆನಂದವನ್ನು ಕಂಡವರು. ಬದುಕಿನ ಅವಧಿಯನ್ನೇ ಸ್ವರ್ಗವನ್ನಾಗಿ ಮಾಡಿಕೊಂಡವರು. ಕುಳಿತುಕೋಳ್ಳುವ ಜಾಗ ಮುಖ್ಯವಲ್ಲ. ನಾವು ಏನು ಮಾಡುತ್ತೇವೆ. ನಾವು ಹೇಗೆ ಬದುಕುತ್ತೇವೆ ಎನ್ನುವುದು ಮುಖ್ಯ ಎಂದು ತೋರಿಸಿಕೊಟ್ಟಿದ್ದಾರೆ ಎಂದರು.

ಭಾರತ ಸಂತರು-ಶರಣರು ಬದುಕಿದ ನಾಡು, ಜಗತ್ತನಲ್ಲಿ ಎಲ್ಲಿಯಾದರೂ ತಪೊ? ಭೂಮಿ ಇದ್ದರೆ, ಅದು ಭರತ ಭೂಮಿ. ಮನುಷ್ಯನಿಗೆ ಜೀವಿಸಲು ಪ್ರಾಣವಾಯು ಸಿಗುವುದು ವನಗಳಿಂದ. ಶ್ರೀ ಸಿದ್ಧೇಶ್ವರ ಶ್ರೀಗಳು ಹೇಳಿರುವ ಗಿಡ ನೆಡುವ ಕಾರ್ಯವನ್ನು ನಾವು ಮುಂದುವರೆಸೋಣ ಎಂದು ಹೇಳಿದರು.

ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, 12 ನೇ ಶತಮಾನದ ಅಣ್ಣ ಬಸವಣ್ಣನವರ ತದ್ರೂಪಿಯಾಗಿ ನಾವು ಶ್ರೀ ಸಿದ್ಧೇಶ್ವರ ಅಪ್ಪಾವರನ್ನು ನೋಡಿದ್ದೇವೆ. ಅವಿಭಜಿತ ವಿಜಯಪುರ ಜಿಲ್ಲೆಯ ಬಗ್ಗೆ ಅಪ್ಪಗಳ ಕನಸು ಬಹಳ ದೊಡ್ಡದು. ಎಲ್ಲ ಪಾಟೀಲರು ಸುದ್ದ ಆದರೆ ವಿಜಯಪುರ ಸುದ್ದ ಆಗ್ತದ ಎಂದು ಅಪ್ಪಗಳು ಹೇಳಿದ್ದರು. ಅವರು ಪ್ರಾಂಜಲ ಮನಸ್ಸಿನಿಂದ ನುಡಿದ ಮಾತುಗಳು ನಮ್ಮ ಹೃದಯದಲ್ಲಿ ಉಳಿದಿವೆ. ಅವರು ನಮ್ಮ ಮನಸ್ಸಿನಲ್ಲಿಯೇ ವಾಸವಾಗಿದ್ದಾರೆ. ಅವರು ಸೂಚಿಸಿರುವ ಕೆಲಸಗಳನ್ನು ಸಾಧ್ಯವಾದಷ್ಟು ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದರು. ಬಸವಲಿಂಗ ಸ್ವಾಮೀಜಿಗಳು ಶ್ರೀ ಸಿದ್ಧೇಶ್ವರ ಅಪ್ಪಗಳ ನಡೆಸಿಕೊಟ್ಟಂತ ಮಾರ್ಗದಲ್ಲಿ ಆಶ್ರಮ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ನಾಡಿನ ಅನೇಕ ಪೂಜ್ಯರು ಹೆಗಲು ಕೊಟ್ಟಿದ್ದಾರೆ. ಶ್ರೀ ಸಿದ್ಧೇಶ್ವರ ಅಪ್ಪಗಳನ್ನು ಕಂಡಿರುವ ವಿಜಯಪುರ-ಬಾಗಲಕೋಟೆ ಜನ ನಾವು ಬಹಳ ಪುಣ್ಯವಂತರು. ಪೂಜ್ಯರು ಈ ಶತಮಾನದ ಶ್ರೇಷ್ಠ ಸಂತರು. ಸೂರ್ಯ-ಚಂದ್ರ ಇರುವವರೆಗೂ ಅವರ ಹೆಸರು ಈ ಭೂಮಿಯ ಮೇಲೆ ಶಾಶ್ವತವಾಗಿ ಇರಲಿದೆ ಎಂದರು.

ಶ್ರೀಸಿದ್ಧೇಶ್ವರಸ್ವಾಮೀಜಿಗಳಗುರುನಮನಮಹೋತ್ಸವ ಕಾರ್ಯಕ್ರಮದಲ್ಲಿ ಜ್ಞಾನಯೋಗಾಶ್ರಮದ ಅಧ್ಯಕ್ಷ ಗುರುಗಳಾದ ಪೂಜ್ಯ ಬಸವಲಿಂಗ ಸ್ವಾಮೀಜಿಗಳು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ನಿವೃತ್ತ ನ್ಯಾಯಾಧೀಶರಾದ ಎ.ಎಸ್.ಪಾಶ್ಚಾಪುರೆ, ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆಯ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಶಾಸಕ ರಮೇಶ ಭೂಸನೂರ, ನಾಡಿನ ಮಠಾಧೀಶರು, ಸ್ವಾಮೀಜಿಗಳು ಹಾಗೂ ಜ್ಞಾನಯೋಗಾಶ್ರಮದ ಭಕ್ತರು ಉಪಸ್ಥಿತರಿದ್ದರು.

# ಸಿದ್ಧೇಶ್ವರ ಶ್ರೀಗಳು ಬುದ್ಧನ ಸ್ವರೂಪಿ: ಸದಾಶಿವಾನಂದ ಶ್ರೀ

**ವಿಜಯಪುರ :** ಒಂದು ಊರಿಂದ, ಒಂದು ಊರಿಗೆ ಹೊರಟರೆ ಸಾಕು, ಸಾವಿರಾರು ಜನರು ಶ್ರೀ ಸಿದ್ಧೇಶ್ವರ ಅಪ್ಪನವರ ಜೊತೆಯಲ್ಲಿ ಹೆಜ್ಜೆ ಹಾಕುತ್ತಿದ್ದರು. ಕಾರಣ ಅವರು ಬುದ್ಧನ ಸ್ವರೂಪಿಯಾಗಿದ್ದರು ಎಂದು ಗದುಗಿನ ಜಗದ್ಗುರು ಸದಾಶಿವಾನಂದ ಮಹಾಸ್ವಾಮಿಗಳು ಹೇಳಿದರು.



ನಗರದ ಜ್ಞಾನಯೋಗಾಶ್ರಮದಲ್ಲಿ ನಡೆಯುತ್ತಿರುವ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗುರುನಮನ ಮಹೋತ್ಸವದ ಅಂಗವಾಗಿ 'ಜಾಗತಿಕ ತಾತ್ವಿಕ ಚಿಂತನೆಗಳು' ಹಮ್ಮಿಕೊಂಡಿದ್ದ 6 ನೇ ಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಸಿದ್ಧೇಶ್ವರ ಅಪ್ಪಾಜಿಯವರಿಗೆ ಹಿರಿಯರೆಂದರೆ, ಜನಸಾಮನ್ಯರೆಂದರೆ, ರೈತರೆಂದರೆ ಅಪಾರ ಪ್ರೀತಿ ದೊಡ್ಡ-ದೊಡ್ಡ ವ್ಯಕ್ತಿಗಳಿಗಿಂತ ಅತ್ಯಂತ ಸರಳ ಸಾಮಾನ್ಯ ಜನರು ಬಂದರೆ ಸಾಕು. ಅಪ್ಪನವರ ಮನಸ್ಸು ಅರಳುತ್ತಿತ್ತು. ಅಂತಹ ವ್ಯಕ್ತಿತ್ವ ಅಪ್ಪನವರದ್ದು ಎಂದರು.

ಜಗತ್ತಿನ ಎಷ್ಟು ಜನ ತತ್ವಜ್ಞಾನಿಗಳು ಆಗಿ ಹೋಗಿದ್ದಾರೋ ಅವರ ಹೆಸರುಗಳೆಲ್ಲ ಅಪ್ಪನರ ನಾಲಿಗೆ ತುದಿಯಲ್ಲಿಯೇ ಇರುತ್ತಿದ್ದವು. ಸಾಕ್ರೇಟಿಸ್, ಪ್ಲೇಟೋ ಸೇರಿದಂತೆ ಹಲವಾರು ತತ್ವಜ್ಞಾನಿಗಳ ಸಾಧನೆ ಬಗ್ಗೆ ಅವರಲ್ಲಿ ಆಳವಾದ ಜ್ಞಾನ ಇತ್ತು. ಜಾಗತಿಕ ತತ್ವ ಚಿಂತನೆಗಳನ್ನು ಒಟ್ಟಾಗಿ ದೇಹ ರೂಪದಲ್ಲಿ ನೋಡಬೇಕಾದರೆ ಅದು ಶ್ರೀ ಸಿದ್ಧೇಶ್ವರ ಅಪ್ಪನವರು ಎಂದು ನುಡಿದರು.

ನೇಮ, ನೀತಿ, ಛಲದಂಕ ಸಾಧಕರಾಗಿದ್ದರು. ಅವರು ಆನಂದ ಸ್ವರೂಪಿಗಳು. ತಾತ್ವಿಕ ಚಿಂತನೆಯಲ್ಲಿ ಬದುಕಿದರೆ ಹೇಗೆ ಬದುಕಬೇಕು ಎನ್ನುವುದು ಶ್ರೀ ಸಿದ್ಧೇಶ್ವರ ಅಪ್ಪನವರನ್ನು ನೋಡಿ ಅರಿಯಬೇಕು. ಅವರು ಯೋಗ ಮಾಡಿ, ಸಾಧನೆ ಮಾಡಿ ಯೋಗಿಯಾದವರಲ್ಲ ಅವರು ಜನ್ಮಥಾ ಯೋಗಿಯಾಗಿದ್ದರು ಎಂದರು.

ಗೋಷ್ಠಿಯನ್ನು ಉದ್ಘಾಟಿಸಿದ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೃಷ್ಣ ದಿಕ್ಷಿತ ಮಾತನಾಡಿ, ನಾನು ಪ್ರಥಮ ಬಾರಿಗೆ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪಕ್ಕದಲ್ಲಿ ಕುಳಿತಾಗ ನನಗೆ ಅನುಭವವಾಗಿದ್ದು ನಾನು ಸಾಕ್ಷಾತ ರಾಮಕೃಷ್ಣ ಪರಮ ಹಂಸರ ಪಕ್ಕದಲ್ಲಿಯೇ ಕುಳಿತಿದ್ದೇನೆ ಎಂಬಂತೆ ಭಾಸವಾಯಿತು. ಅಪೂರ್ಣವಾಗಿದ್ದ ನಾನು ಪೂರ್ಣಗೊಂಡ ಅನುಭವವಾಯಿತು ಎಂದು ಹೇಳಿದರು.

ಅವರ ಮುಖದ ಶಾಂತತೆ ನನ್ನ ಎಲ್ಲ ಪ್ರಶ್ನೆಗಳಿಗೂ ಮೌನವಾಗಿಯೇ ಉತ್ತರ ನೀಡಿತು. ಅವರ ಮಾತುಗಳು ನನ್ನ ಜೀವನದಲ್ಲಿ ಕವಿದ ಕತ್ತಲನ್ನು ಸರಿಸಿ ಬೆಳಕಿನ ದೀಪವನ್ನು ಹಚ್ಚಿದವು. ಆ ಸಮಯದಲ್ಲಿ ನಾನು ಅತ್ಯಂತ ಖಿನ್ನತೆಗೆ ಒಳಗಾಗಿದ್ದೆ, ಜೀವನದಲ್ಲಿ ಅತ್ಯಂತ ದುಖದ ಸಮಯ ನನ್ನದಾಗಿತ್ತು. ಆಗ ಆ ಸಮಯದಲ್ಲಿ ಶ್ರೀಗಳು ನನ್ನ ಬದುಕಿನಲ್ಲಿ ಬಂದಂತಹ ಭಗವಂತರಾದರು. ಬದುಕಿಗೆ ಹೊಸ ರೂಪವನ್ನು ನೀಡಿದಂತವರು. ಬದುಕಿನಲ್ಲಿ ಕಷ್ಟಗಳನ್ನು ಮೆಟ್ಟಿ ನಿಂತು ಹೇಗೆ ಬದುಕಬೇಕು. ಹೇಗೆ ಗೆಲ್ಲಬೇಕು ಎಂದು ಕಲಿಸಿದವರು. ಆ ಮುಳುಗುತ್ತಿರುವ ನನ್ನ ಜೀವನದ ದೋಣಿಯಿಂದ ಇಂದು ನಾನು ಇಷ್ಟು ದೊಡ್ಡ ಮಟ್ಟದ ಯಶಸ್ಸನ್ನು ಮುಟ್ಟಿದ್ದೇನೆ. ನಿಮ್ಮೆಲ್ಲರ ಮುಂದೆ ನಿಂತಿದ್ದೇನೆ ಎಂದರೆ ಅದಕ್ಕೆ ಶ್ರೀ ಸಿದ್ಧೇಶ್ವರ ಅಪ್ಪನವರೆ ಕಾರಣ. ಅವರೊಬ್ಬ ಮಹಾನ್ ಮನ:ಶಾಸ್ತ್ರಜ್ಞರಾಗಿದ್ದರು ಎಂದು ಶ್ರೀಗಳೊಂದಿಗಿನ ತಮ್ಮ ಅನುಭವವನ್ನು ಹಂಚಿಕೊಂಡರು.

ಶ್ರೀಗಳು ಒಬ್ಬ ಮಹಾನ್ ಋಷಿಯಾಗಿದ್ದರು. ಎಲ್ಲ ಪ್ರಶ್ನೆಗಳಿಗೂ ಉತ್ತರವಾದಂತವರು. ಜಗತ್ತಿನ ಎಲ್ಲ ಪ್ರಶ್ನೆಗಳಿಗೂ ಅವರಲ್ಲಿ ಉತ್ತರವಿರುತ್ತಿತ್ತು. ಇನ್ನು ಅವರ ಮಾತಿನ ಮುಂದೆ ಎಷ್ಟೋ ಪ್ರಶ್ನೆಗಳು ಸತ್ತು ಹೋಗುತ್ತಿದ್ದವು. ಅಂತಹ ತತ್ವಜ್ಞಾನಿಯಾಗಿದ್ದರು ಶ್ರೀಗಳು ಎಂದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪುರ, ಭಾಷಣ ಮಾಡುವುದೆಂದರೆ ನನಗೆ ಪಂಚಪ್ರಾಣ. ಆದರೆ ಪರಮ ಪೂಜ್ಯ ಜಗತ್ತಿನ ಅತ್ಯಂತ ಶ್ರೇಷ್ಠ ಸಂತ ಶ್ರೀ ಸಿದ್ಧೇಶ್ವರ ಅಪ್ಪನವರ ಬಗ್ಗೆ ಮಾತನಾಡುವುದು ಸರಳವಲ್ಲ. ಅವರ ಬಗ್ಗೆ ಮಾತನಾಡಲು ಯಾವ ಪದಗಳು ಹೋಲಿಕೆ ಆಗುವುದಿಲ್ಲ. ಎಲ್ಲದಕ್ಕೂ ಮೀರಿದ ಮಹಾತ್ಮರು ಶ್ರೀ ಸಿದ್ಧೇಶ್ವರ ಅಪ್ಪಾಜಿಯವರು ಎಂದರು.

ಶ್ರೀ ಅಪ್ಪಾಜೀಯವರು ಎಲ್ಲ ಕ್ಷೇತ್ರಗಳ ಬಗ್ಗೆ ಅಪಾರ ಜ್ಞಾನ ಹೊಂದಿದಂತವರು. ಯಾರಲ್ಲಿ ಯಾವ ಕೌಶಲ್ಯವಿದೆ. ಯಾರಿಂದ ಏನು ಕೆಲಸವಾಗುತ್ತದೆ ಎಂಬ ಅರಿವು ಶ್ರೀಗಳಿಗಿತ್ತು. ಆಧ್ಯಾತ್ಮದ ಜೊತೆಗೆ ಲೌಕಿಕ ಜಗತ್ತಿನಲ್ಲಿಯೂ ಅಭಿವೃದ್ಧಿಯನ್ನು ತರಲು ಪ್ರಯತ್ನಿಸಿದಂತವರು. ಅವರೊಬ್ಬ ನಿಜವಾದ ತತ್ವಜ್ಞಾನಿಯಾಗಿದ್ದರು ಎಂದರು.

ಜಿಲ್ಲೆಯ ಬಿಜ್ಜರಗಿಯಲ್ಲಿ ಭಾಷ್ಕಾರಾಚಾರ್ಯರ ಸಂಶೋಧನೆ ಪ್ರಾರಂಭವಾಗಲು ಅದರ ಬಗ್ಗೆ ಚರ್ಚೆ ಹುಟ್ಟು ಹಾಕಿದವರೆ ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು. ಭಾಷ್ಕಾರಾಚಾರ್ಯ ನಮ್ಮವರು ಎಂಬುವುದನ್ನು ಇಡೀ ಜಗತ್ತಿಗೆ ತೋರಿಸಿ ಕೊಡಲು ಕಾರಣೀಭೂತರಾದಂತವರು ಅಪ್ಪನವರು. ಈ ಮೂಲಕ ನಮ್ಮ ಜಿಲ್ಲೆಗೆ ಹಲವಾರು ವಿಜ್ಞಾನಿಗಳು ಆಗಮಿಸುವಂತೆ ಮಾಡಿದವರು. ನಾನು ಅಪ್ಪನವರನ್ನು ಬರೀ ಆಧ್ಯಾತ್ಮಕತೆಗೆ ಮಾತ್ರ ಸೀಮಿತಗೊಳಿಸಲು ಇಚ್ಛಿಸುವುದಿಲ್ಲ ಬದಲಿಗೆ, ವಿಜ್ಞಾನ, ಪರಿಸರ, ಶಿಕ್ಷಣ, ಕೃಷಿ, ಹೀಗೆ ಹಲವಾರು ಕ್ಷೇತ್ರಗಳಲ್ಲಿ ಬದಲಾವಣೆ ತರಲು ಚಿಂತಿಸಿ ಅದನ್ನು ಕಾರ್ಯ ರೂಪಕ್ಕೆ ತರುವಲ್ಲಿ ಪ್ರಯತ್ನಿಸಿದವರು ಶ್ರೀ ಸಿದ್ಧೇಶ್ವರ ಶ್ರೀಗಳು. ಅಂತಹವರ ನೆರಳಿನಲ್ಲಿ ನಾವು ಬದುಕಿ ಪಾವನರಾಗಿದ್ದೇವೆ ಅದು ನಮ್ಮ ಪುಣ್ಯ ಎಂದು ಹೇಳಿದರು.

ಇನ್ನೋರ್ವ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ನಾನು ನನ್ನ ಜೀವನದಲ್ಲಿ ಇಷ್ಟು ಸರಳವಾಗಿ ಬದುಕುತ್ತಿದ್ದರೆ, ನನ್ನ ಜೀವನದಲ್ಲಿ ಏನಾದರೂ ಬದಲಾವಣೆ ಕಂಡಿದ್ದರೆ ಅದು ಶ್ರೀ ಸಿದ್ಧೇಶ್ವರ ಅಪ್ಪನವರು ಕಾರಣ ಎಂದು ಹೇಳಿದರು.

ನಾನು ನನ್ನ ಜೀವನದಲ್ಲಿ ಅವರ ಪ್ರವಚನಗಳನ್ನು ಕೇಳುತ್ತಾ ಅವರ ಮಾತುಗಳನ್ನು ಪಾಲಿಸಲು ಎಂದಿನಿಂದ ಪ್ರಾರಂಭಿಸಿದೆ. ಅಂದಿನಿಂದ ನನ್ನ ಬದುಕಿನ ರೀತಿಯೇ ಬದಲಾಯಿತು. ಅವರ ಸಮೀಪದಲ್ಲಿ ಬದುಕುವ ಅವಕಾಶ ನನಗೆ ಸಿಕ್ಕಿದ್ದೇ ನನ್ನ ಸುದೈವ ಮತ್ತು ನನ್ನ ಪುಣ್ಯ ಎಂದರು.

ಬೆಂಗಳೂರಿನ ಗೋಸಾಯಿ ಮಹಾಸಂಸ್ಥಾನ ಮಠದ ಪ.ಪೂ ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ನಾನು ಈ ಮಾರ್ಗಕ್ಕೆ ಬಂದಿದ್ದೆ ಅಪ್ಪಾಜಿಯವರ ಪ್ರವಚನ, ಮಾತುಗಳನ್ನು ಕೇಳಿ. ಒಬ್ಬ ಯೋಗಿ ಹೇಗೆ ಇರುತ್ತಾನೆ ಎಂಬುವುದಕ್ಕೆ ಸಾಕ್ಷಿಯಾದಂತವರು. ಇಡೀ ಸಂತ ಕುಲಕ್ಕೆ ಮಾದರಿಯಾದಂತವರು ಶ್ರೀ ಸಿದ್ಧೇಶ್ವರ ಅಪ್ಪನವರು ಎಂದು ಹೇಳಿದರು.

ವಿಜಯಪುರದ ಶ್ರೀ ಷಣ್ಮುಖಾರೂಢ ಮಠದ ಪೂಜ್ಯ ಶ್ರೀ ಅಭಿನವ ಸಿದ್ಧರೂಢ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಅಂಧಕಾರವನ್ನು ಕಳೆಯುವವನೆ ಗುರು. ಕತ್ತಲೆಯಿಂದ ಬೆಳಕಿನೆಡೆಗೆ ನಮ್ಮನ್ನು ಕರೆದುಕೊಂಡು ಹೋಗುವವನೆ ಗುರು. ಅಂತಹ ನಮ್ಮ ಜೀವನದ ಕತ್ತಲನ್ನು ಕಳೆದು ಬೆಳಕು ತುಂಬಿದವರು ಅಜ್ಞಾನದ ಕತ್ತಲೆಯನ್ನು ಕಳೆದ ಜ್ಞಾನದ ಬೆಳಕನ್ನು ತುಂಬಿದಂತವರು. ಸನ್ಯಾಸ ಕುಲದ ರಾಷ್ಟ್ರಪತಿಗಳೆಂದರೆ ಅದು ಶ್ರೀ ಸಿದ್ಧೇಶ್ವರ ಶ್ರೀಗಳು ಎಂದು ಹೇಳಿದರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಸುಜ್ಞಾನದ ಬೆಳಕನ್ನು ಜಗತ್ತಿಗೆ ತುಂಬುವ ಮೂಲಕ ಅರಿವಿನ ದೀಪದ ಮೂಲಕ ನಮ್ಮ ಮನಸ್ಸಿನ ಕತ್ತಲೆಯನ್ನು ಕಳೆದಂತವರು. ಅಂತಹ ಒಂದು ಭವ್ಯ ವ್ಯಕ್ತಿತ್ವ ಹೊಂದಿಂದತವರು ನಮ್ಮ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಎಂದರು. ಇದೇ ಸಂದರ್ಭದಲ್ಲಿ ವಿವಿಧ ಮಠಾಧೀಶರು, ರೈತರು, ನಾಯಕರು, ನೂರಾರು ಭಕ್ತರು ಉಪಸ್ಥಿತರಿದ್ದರು. ಮುಖ್ಯಮಂತ್ರಿ ಚಿನ್ನದ ಪದಕ ಪಡೆದಂತಹ ಜ್ಯೋತಿರ್ಲಿಂಗ ಹೊನಕಟ್ಟಿ ಜಾನಪದ ಗೀತೆ ಹಾಡಿದರು. ವಿಜಯಪುರದ ಚಾಣಕ್ಯ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಟಿ.ಮೇರವಾಡೆ ಸ್ವಾಗತಿಸಿದರು, ಸಂಗಮೇಶ ಬಾಬು ನಿರೂಪಿಸಿದರು.

# ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವುದು ಅತ್ಯಂತ ಅಗತ್ಯ: ಸಚಿವ ರಾಮಲಿಂಗಾ ರೆಡ್ಡಿ

**ಎನ್‌ಇಎಸ್ ಶಿಕ್ಷಣ ಸಂಸ್ಥೆಯಲ್ಲಿ ಅತ್ಯಾಧುನಿಕ ಎನ್‌ಇ ಸೂಪರ್ ನೋವಾ 2.0 ವಿಜ್ಞಾನ ಮೇಳ : 350 ಕ್ಕೂ ಅಧಿಕ ಮಾದರಿಗಳ ಪ್ರದರ್ಶನ**

**ಬೆಂಗಳೂರು :** ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವುದು ಅತ್ಯಂತ ಅಗತ್ಯವಾಗಿದ್ದು, ಸೂಕ್ತ ಪ್ರೋತ್ಸಾಹ ನೀಡಿದರೆ ಉತ್ತಮ ಪ್ರತಿಭೆಗಳನ್ನು ಸೃಷ್ಟಿಸಲು ಸಾಧ್ಯ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ದಿ ನ್ಯಾಷನಲ್ ಎಜುಕೇಶನ್ ಸೊಸೈಟಿಯಿಂದ ವಿಜ್ಞಾನ ಪ್ರದರ್ಶನ ಎನ್‌ಇ ಸೂಪರ್ ನೋವಾ 2.0 ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಪ್ರತಿಭೆಗಳಿದ್ದಾರೆ.



ತಮ್ಮ ವಿಧಾನಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ ವಿಜ್ಞಾನ ಮೇಳ ಆಯೋಜಿಸುತ್ತಿದ್ದು, ಅತ್ಯುತ್ತಮ ವಿಜ್ಞಾನ ಮಾದರಿಗಳನ್ನು ನಿರ್ಮಿಸಿ ಪ್ರದರ್ಶಿಸುವುದನ್ನು ಕಂಡು ವಿಸ್ಮಯಗೊಂಡಿದ್ದೇನೆ. ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ. ಆದರೆ ಪ್ರತಿಭಾವಂತರಿಗೆ ಇಂತಹ ವಿಜ್ಞಾನ ಪ್ರದರ್ಶನಗಳು ಸೂಕ್ತ ವೇದಿಕೆ ಒದಗಿಸಬೇಕು ಎಂದರು.

ನ್ಯಾಷನಲ್ ಕಾಲೇಜು ಬಹು ಹಿಂದಿನಿಂದಲೂ ವೈಜ್ಞಾನಿಕ ಮನೋಭಾವನೆ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಹಿಂದಿನ ಗತ ವೈಭವವನ್ನು ಮತ್ತೆ ಮರಳಿ ತರಲು ಪ್ರಯತ್ನಿಸಬೇಕು. ಅನೇಕ ಮಹನೀಯರು ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದು, ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಶಾರ್ ಗಿರಿನಾಥ್ ಮಾತನಾಡಿ, ವಿದ್ಯಾರ್ಥಿಗಳು ವಿಜ್ಞಾನದಲ್ಲಿ ನೊಬೆಲ್ ಪುರಸ್ಕಾರ ಪಡೆಯುವಷ್ಟು ಪ್ರತಿಭೆಗಳಿದ್ದು, ಸೂಕ್ತ ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಕಲಿಕೆ ಅನುಭವ ಆಧಾರಿತವಾಗಿರಬೇಕು. ದುರದೃಷ್ಟಕರವೆಂದರೆ ವಿಜ್ಞಾನ ಕಲಿತಿದ್ದರೂ ತಮ್ಮ ದೈನಂದಿನ ಬದುಕು, ಕೆಲಸದಲ್ಲಿ ವೈಜ್ಞಾನಿಕ ಚಿಂತನೆ ಅಳವಡಿಸಿಕೊಂಡಿರುವುದಿಲ್ಲ. ವಿಜ್ಞಾನದ ಪ್ರಯೋಜನಗಳನ್ನು ಎಲ್ಲಾ ಹಂತಗಳಲ್ಲಿ ಬಳಸಿಕೊಳ್ಳುವುದು ಅಗತ್ಯವಿದೆ ಎಂದು ಹೇಳಿದರು.

ಎನ್‌ಇಎಸ್ ಸಂಸ್ಥೆ ಕಾರ್ಯದರ್ಶಿ ವಿ. ವೆಂಕಟಶಿವಾರೆಡ್ಡಿ ಮಾತನಾಡಿ, ಈ ಬಾರಿ ವಿಜ್ಞಾನ ಪ್ರದರ್ಶನ ಅತ್ಯಂತ ವಿನೂತನವಾಗಿದ್ದು, ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಪದವಿವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಇದು ಉತ್ತಮ ವೇದಿಕೆಯಾಗಿದೆ. ಈ ಬಾರಿ 350 ಕ್ಕೂ ಅಧಿಕ ಮಾದರಿಗಳನ್ನು ಪ್ರದರ್ಶಿಸಲಾಗುತ್ತಿದೆ. ಭಾರತೀಯ ವಿಜ್ಞಾನ ಮಂದಿರ, ನೆಹರು ತಾರಾಲಯ, ನಿಮ್ಹಾನ್ಸ್ ಒಳಗೊಂಡಂತೆ 60 ಕ್ಕೂ ಅಧಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದಾರೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷರಾದ ಡಾ.ಎಚ್. ಎನ್. ಸುಬ್ರಮಣ್ಯ, ಉಪಾಧ್ಯಕ್ಷರಾದ ವೈ.ಜಿ. ಮಧುಸೂಧನ್, ಕಾರ್ಯದರ್ಶಿ ಬಿ.ಎಸ್. ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿ ಸುಧಾಕರ್ ಇಸ್ತೂರಿ, ಸಹ ಉಪಾಧ್ಯಕ್ಷರಾದ ವಿ. ಮಂಜುನಾಥ್, ಡಾ. ಪಿ ಎಲ್ ವೆಂಕಟರಾಮ ರೆಡ್ಡಿ, ರಾಮ್ ಮೋಹನ್ ಕೆ ಎನ್ ಉಪಸ್ಥಿತರಿದ್ದರು.

# ಪ್ರಾಚಾರ್ಯರ ಮಹಮಂಡಳದ ತಾಲೂಕ ಅಧ್ಯಕ್ಷರಾಗಿ ಪ್ರಭು ಜವಳಿ ಆಯ್ಕೆಗೆ ಸನ್ಮಾನ



**ಬಾದಾಮಿ :** ಬಾದಾಮಿಯ ಎಸ್‌ಜಿಎಂಕೆ ಪದವಿಪೂರ್ವ ಕಾಲೇಜ್ ಪ್ರಾಚಾರ್ಯ ಪ್ರಭು ಜವಳಿ ಅವರು ಕರ್ನಾಟಕ ರಾಜ್ಯ ಪದವಿ ಪೂರ್ವ ನೌಕರರ ಸಂಘ ಧಾರವಾಡ ಜಿಲ್ಲಾ ಘಟಕ ಬಾಗಲಕೋಟ ಪ್ರಾಚಾರ್ಯರ ಮಹಮಂಡಳದಲ್ಲಿ ಬಾದಾಮಿ ತಾಲೂಕ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಇವರನ್ನು ಎಸ್‌ಜಿಎಂಕೆ ಪದವಿಪೂರ್ವ ಕಾಲೇಜ್ ಉಪನ್ಯಾಸಕರ ವತಿಯಿಂದ ಸನ್ಮಾನಿಸಲಾಯಿತು

ಉಪನ್ಯಾಸಕರಾದ ಎಂ.ಐ ಹುಲ್ಲೂರ, ಗುರಚನ್ನ ಮಾಳವಾಡ, ಬಸವರಾಜ ಉಳ್ಳಾಗಡ್ಡಿ, ಪಾರ್ವತಿ ಲೆಂಕೆನ್ನವರ, ಎಸ್.ಎಂ ಹಂಪಿಹೊಳಿಮಠ, ವಿಶಾಲ ಜವಳಿ, ಆನಂದ ನಾಡಗೌಡ್ರ, ಬಿ.ಸಿ ಗುರಿಕಾರ, ಶ್ರೀಮತಿ ಸುಧಾ, ಡಿ.ಕೆ ಹೆರಕಲ್, ಎಂ.ಜಿ ಆನೆಪ್ಪನವರ, ಎಸ್.ಬಿ ಮನಗೂಳಿ, ಆರ್.ಎಸ್.ಕುರಮನಾಳ, ಆನಂದ ಭಜಂತ್ರಿ, ಜಿ.ಸಿ ತುಪ್ಪದ, ಸಿ.ಬಿ ಆಳಗುಂಡಿ, ಶ್ರೀಮತಿ ಮಠಪತಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಜಿಲ್ಲೆಯಲ್ಲಿ ಕೈಕಾರಿಕೆ ಸ್ಥಾಪನೆಗೆ ಒತ್ತಡ ಹೇರಲು ಮನವಿ



**ಬಾಗಲಕೋಟೆ :** ಬೆಂಗಳೂರನಲ್ಲಿ ಜರುಗಲಿರುವ ಜಾಗತಿಕ ಹೂಡಿಕೆದಾರರ ಸಮ್ಮೇಳನ 2025ರಲ್ಲಿ ವಿಶೇಷವಾಗಿ ಬಾಗಲಕೋಟೆಜಿಲ್ಲೆಯಲ್ಲಿಕೈಗಾರಿಕೆ ಸ್ಥಾಪಿಸಿಲು ಹೂಡಿಕೆದಾರರನ್ನು ಆಕರ್ಷಿಸಲು ಜಿಲ್ಲೆಯ ವಿಪುಲ ಅವಕಾಶಗಳನ್ನು ಮನವರಿಕೆ ಮಾಡಿಕೊಡಲು ರಾಜ್ಯದ ಬೃಹತ್ ಕೈಗಾರಿಕಾ ಸಚಿವರಿಗೆ ಒತ್ತಡ ತರಲು ಬಾಗಲಕೋಟ ಶಾಸಕರಾದ ಹೆಚ್. ವಾಯ್. ಮೇಟಿ ರವರ ಮುಖಾಂತರ ಮನವಿ ಸಲ್ಲಿಸಲಾಯಿತು.

ಇದೆ ಫೆಬ್ರವರಿ ತಿಂಗಳಲ್ಲಿ ರಾಜ್ಯ ಸರ್ಕಾರದ ವತಿಯಿಂದ ಹಮ್ಮಿಕೊಳ್ಳಾಗುವ ಜಾಗತಿಕ ಹೂಡಿಕೆದಾರರ ಸಮ್ಮೇಳನದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೈಗಾರಿಕೆ ಸ್ಥಾಪಿಸಲು ಲಭ್ಯವಿರುವ ವಿಪುಲ ಅವಕಾಶಗಳನ್ನು ಹೂಡಿಕೆದಾರರ ಮುಂದೆ ಪ್ರಸ್ತುತಪಡಿಸಿ, ಆಸಕ್ತ ಉದ್ದಿಮೆದಾರರನ್ನು ಜಿಲ್ಲೆಯಲ್ಲಿ ಕೈಗಾರಿಕಾಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಉತ್ತೇಜಿಸುವಮೂಲಕಜಿಲ್ಲೆಯಲ್ಲಿ ಔದ್ಯೋಗಿಕಚಟುವಟಿಕೆಆರಂಭಕ್ಕೆ ಕಾರಣವಾಗಲಿಆಮೂಲಕಹಲವು ದಶಕಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಆರ್ಥಿಕವಾಗಿ ಹಿಂದುಳಿದ ಬಾಗಲಕೋಟೆ ಪುನರುಜ್ಜೀವನಗೊಳಿಸಲು ಸಹಕಾರ ಹಾಗೂ ಸಹಾಯ ಮಾಡಬೇಕೆಂದು ಆ ಮೂಲಕ ಬಾಗಲಕೋಟೆಯ ವ್ಯಾಪಾರ ಉದ್ಯೋಗ ಬೆಳವಣಿಗೆ ಅನುಕೂಲವಾಗುವಂತೆ ಸೂಕ್ತ ಕ್ರಮಗಳನ್ನುಸರ್ಕಾರದಮಟ್ಟದಲ್ಲಿ ಕೈಗೊಳ್ಳಲು, ಬಾಗಲಕೋಟ ಯೂನಿಯನ್ ಆಫ್ ಮರ್ಚೆಂಟ್ ಅಸೋಸಿಯೇಷನ್ ವತಿಯಿಂದ ಶಾಸಕರಿಗೆ ಮನವಿ ಸಲ್ಲಿಸಲಾಯಿತು.

ಅಧ್ಯಕ್ಷರಾದ ರವಿ ಕುಮಟಗಿ, ಉಪಾಧ್ಯಕ್ಷ ಶ್ರೀನಿವಾಸ ಬಳ್ಳಾರಿ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ಅಮೃತಕರ ಜಂಟಿ ಕಾರ್ಯದರ್ಶಿ ಬಾಳು ಉಳ್ಳಾಗಡ್ಡಿ ದ್ಯಾಮಣ್ಣ ಗಾಳಿ ನಾಗೇಶ ಅಂಬಿಗೇರ ಹಾಜರಿದ್ದರು.

# ಕಿರ್ಲೋಸ್ಕರ್ ಕಾರ್ಖಾನೆಯಿಂದ ಇನ್ನರ್ ವೀಲ್ ಕ್ಲಬ್ ದತ್ತಕ ಶಾಲೆಗೆ ನೀರು ಶುದ್ದೀಕರಣ ಯಂತ್ರ ವಿತರಣೆ

**ಕೊಪ್ಪಳ :** ಶಿಕ್ಷಣ ಮತ್ತು ಸಮುದಾಯ ಕಲ್ಯಾಣಕ್ಕಾಗಿ, ಕಿರ್ಲೋಸ್ಕರ್ ಇಂಡಸ್ಟ್ರೀಸ್ ಲಿಮಿಟೆಡ್, ಕೊಪ್ಪಳ, ರೂ.2,00,000 ಮೌಲ್ಯದ ವಾಣಿಜ್ಯ ಆರ್ ಓ,ನೀರಿನ ಶುದ್ಧೀಕರಣ ಯಂತ್ರವನ್ನು ಇನ್ನರ್ ವೀಲ್ ಕ್ಲಬ್ ಆಫ್ ಕೊಪ್ಪಳದ ದತ್ತಕ ಸಿಪಿಎಸ್ ಶಾಲೆಗೆ ಜನವರಿ 1, 2025 ರಂದು ಹೊಸ ವರ್ಷದ ಪ್ರಯುಕ್ತ ದಾನ ವಾಗಿ ನೀಡಲಾಗಿದೆ . ಈ ಶುದ್ಧೀಕರಣ ಯಂತ್ರದ ಸ್ಥಾಪನೆಯಿಂದ 315 ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಸ್ವಚ್ಛ ಶುದ್ಧ ಕುಡಿಯುವ ನೀರನ್ನು ಲಭ್ಯಗೊಳಿಸಲು ಸಹಾಯವಾಗಿದೆ.




ಇದಕ್ಕೂ ಮುನ್ನ, ಕಿರ್ಲೋಸ್ಕರ್ ಇಂಡಸ್ಟ್ರೀಸ್ ಶಾಲೆಗೆ 25 ಬೆಂಚುಗಳನ್ನು ದಾನ ಮಾಡಿದ್ದು, ವಿದ್ಯಾರ್ಥಿಗಳ ಪಾಠ ವಾತಾವರಣವನ್ನು ಸುಧಾರಿಸಲು ಅನುಕೂಲ ಮಾಡಿಕೊಟ್ಟಿತ್ತು. ಶಿಕ್ಷಣ ಹಾಗೂ ಸಮುದಾಯ ಅಭಿವೃದ್ಧಿಗಾಗಿ ಕಿರ್ಲೋಸ್ಕರ್ ಇಂಡಸ್ಟ್ರೀಸ್ನ ನಿರಂತರ ಕೊಡುಗೆ ಶ್ಲಾಘನೀಯವಾಗಿದೆ. ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಬಣ್ಣಿಸಿದರು, ಶಾಲೆಯಲ್ಲಿ ನೀರು ಶುದ್ದೀಕರಣ ಯಂತ್ರ ಸ್ಥಾಪನೆ ಮಾಡುವ ಕಾರ್ಯಕ್ರಮದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಪದಾಧಿಕಾರಿಗಳಾದ

* ಸುಜಾತಾ ಪಟ್ಟಣಶೆಟ್ಟಿ
* ನಾಗವೇಣಿ ಗರೂರು ಅಲ್ಲದೆ

ರೋ ಹಿತ್ ಅಗರವಾಲ್. ಗುರುರಾಜ ಹೆಚ್ಚ ಎಸ್ ಉಪಸ್ಥಿತರಿದ್ದು ಮಹತ್ವದಾಯಿ ಕಾರ್ಯಕ್ರಮದ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು

ಆರೋಗ್ಯ ಹಾಗೂ ಶಿಕ್ಷಣ ಅಭಿವೃದ್ಧಿಗಾಗಿ ಮಹತ್ವದ ಯೋಜನೆ

ಈ ಮಹತ್ವದ ಯೋಜನೆಯಿಂದ ಇನರ್ ವೀಲ್ ಕ್ಲಬ್ ಆಫ್ ಕೊಪ್ಪಳದ ಸಮಾಜ ಸೇವಾ ಕಾರ್ಯಗಳು ಮತ್ತಷ್ಟು ಬಲಪಡಿತ್ತಿದ್ದು, ಸ್ವಚ್ಛ ಕುಡಿಯುವ ನೀರಿನ ಲಭ್ಯತೆ ಮೂಲಕ 315 ವಿದ್ಯಾರ್ಥಿಗಳ ಆರೋಗ್ಯ ಮತ್ತು ಕಲಿಕೆಯ ಗುಣಮಟ್ಟ ಹೆಚ್ಚಾಗಲು ಸಹಾಯವಾಗಿದೆ. ಎಂದು ಶಿಕ್ಷಕ ವರ್ಗದವರು ಕರ್ತೃಘ್ನತೆ ಸಲ್ಲಿಸಿದರು

ಇನರ್ ವೀಲ್ ಕ್ಲಬ್ ಆಫ್ ಕೊಪ್ಪಳವು ಕಿರ್ಲೋಸ್ಕರ್ ಇಂಡಸ್ಟ್ರೀಸ್ ಲಿಮಿಟೆಡ್ಗೆ ಅವರ ಉತ್ಸಾಹಭರಿತ ಬೆಂಬಲಕ್ಕಾಗಿ ಹಾಗೂ ಈ ಸಮಾಜಮುಖಿ ಕಾರ್ಯವನ್ನು ಯಶಸ್ವಿಗೊಳಿಸಿದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸುವೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State